ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ರಾಹುಲ್ ದ್ರಾವಿಡ್ ಅವರು ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ಹುದ್ದೆ ತೊರೆದಿದ್ದಾರೆಂದು ಫ್ರಾಂಚೈಸಿ ಶನಿವಾರ ದೃಢಪಡಿಸಿದೆ.





ಸಾಟಿ ಇಲ್ಲದ ವ್ಯಕ್ತಿತ್ವದ ಟಿ.ಆರ್.ಶಾಮಣ್ಣ » 2



ಸತ್ಯದ ಶಕ್ತಿ ಅದರ ಪ್ರತಿಪಾದನೆಯಲ್ಲಿದೆ » 3



ಪಿಎಂಎವೈ ಅಕ್ರಮ : ಗ್ರಾ.ಪಂ. ಸದ್ಯರಿಗೆ ಸಂಬಂಧವಿಲ್ಲ » 4

# ಜೂಜಾಟ ತಡೆ ಕಾಯ್ದೆ: ಹೈಕೋರ್ಟ್ ನೋಟೀಸ್

## ಆತುರದ ಅಂಗೀಕಾರ ವಿರೋಧಿಸಿದ್ದ ಉದ್ದಿಮೆದಾರರು | ಸೆ.8ಕ್ಕೆ ವಿಚಾರಣೆ ಮುಂದೂಡಿಕೆ

• ಪ್ರಜೋದಯ ವರದಿ



**ಬೆಂಗಳೂರು:** ಆನ್‌ಲೈನ್ ಜೂಜು ನಿಷೇಧಿಸಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ನೋಟೀಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಕಾಯ್ದೆಯನ್ನು ಪ್ರಶ್ನಿಸಿ ದೆಹಲಿಯ, ಹೆಡ್ ಡಿಜಿಟಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸಿದ್ಧಾರ್ಥ ಶರ್ಮಾ ಮತ್ತು ಮುಂಬೈನ ಸುಮಿತ್ ಸಿಂಗ್ ನಿಂದರಾ ಜೋಗ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್‌ಪ್ರಸಾದ್ ಅವರ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಆರ್ಯಮಾ ಸುಂದರಮ್ ಅವರು, ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆಗೆ ರಾಷ್ಟ್ರಪತಿ ಈಗಾಗಲೇ ಅಂಕಿತ ಹಾಕಿದ್ದಾರೆ. ಆದರೆ, ಅಧಿಸೂಚನೆ ಇನ್ನೂ ಪ್ರಕಟವಾಗಿಲ್ಲ. ರಾತ್ರೋರಾತ್ರಿ ಗೇಮಿಂಗ್ ಕ್ಷೇತ್ರವನ್ನು ಮುಚ್ಚಿದರೆ ಅದರಿಂದ ಭಾರೀ ಅಪಾಯ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅದರಲ್ಲಿ ಲಕ್ಷಾಂತರ ಮಂದಿಯ ಉದ್ಯೋಗದ ವಿಚಾರ ಅಡಕವಾಗಿದೆ. ಹಾಗಾಗಿ, ಅರ್ಜಿಗೆ ಸಂಬಂಧಿಸಿದಂತೆ ನಮ್ಮ ವಾದ ಪೂರ್ಣಗೊಳ್ಳುವ ತನಕ ಕೇಂದ್ರ ಸರ್ಕಾರ ಕಾಯ್ದೆಯ ಅಧಿಸೂಚನೆ ಪ್ರಕಟಿಸದಂತೆ ನಿರ್ದೇಶಿಸಬೇಕು. ಇಲ್ಲವೇ, ಅಧಿಸೂಚನೆ ಪ್ರಕಟಿಸುವುದಕ್ಕೂ ಒಂದು ವಾರ ಮೊದಲು ನಮಗೆ ಮಾಹಿತಿ ನೀಡಲು ನಿರ್ದೇಶಿಸ ಬೇಕೆಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಅದಕ್ಕೆ ವಿರೋಧ ವ್ಯಕ್ತಪಡಿ ಸಿದ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಯಾರಿಗೋ ಸಮಸ್ಯೆ ಯಾಗಿದೆ ಎಂದ ಮಾತ್ರಕ್ಕೆ ಕಾಯ್ದೆಗೆ ಸಂಬಂಧಿಸಿದ ಅಧಿಸೂಚನೆ ಪ್ರಕಟಿ ಸುವುದನ್ನು ಮುಂಚಿತವಾಗಿ ತಿಳಿಸುವ ಅಗ ತ್ಯವಿಲ್ಲ. ಈ ವಿಷಯದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡಲಾಗದು. ಅದರಲ್ಲಿ ಗಡಿಯಾಚೆಗಿನ ಪರಿಣಾಮಗಳಿವೆ ಎಂಬುದನ್ನು ನ್ಯಾಯಪೀಠ ಸೂಕ್ಷ್ಮವಾಗಿ ಪರಿಗಣಿಸಬೇಕೆಂದು ಕೋರಿದರು.

ಮಸೂದೆಗೆ ರಾಷ್ಟ್ರಪತಿ ಅಂಕಿತ ಹಾಕಿದ ಬಳಿಕ ಅಧಿಸೂಚನೆ ಪ್ರಕಟಿಸುವುದು ಸಾಂವಿಧಾನಿಕ ಪ್ರಕ್ರಿಯೆ. ಆದರೂ ಅರ್ಜಿಗೆ ಸಂಬಂಧಿಸಿ ನೋಟೀಸ್ ಜಾರಿ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದರು.

ವಾದಪ್ರತಿವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಯಾದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿಗೆ ನೋಟೀಸ್ ಜಾರಿ ಗೊಳಿಸಲು ಆದೇಶಿಸಿತು. ಅಂತೆಯೇ, ಆಕ್ಷೇಪಣೆ ಸಲ್ಲಿಸಲು ಸೂಚಿಸಿ ವಿಚಾರಣೆಯನ್ನು ಸೆ.8ಕ್ಕೆ ಮುಂದೂಡಿತು.

**ಕೋರ್ಟ್ ಮೆಟ್ಟಿಲೇರಿದ್ದ ಎ23 ರಮ್ಮಿ**

ಸಂಸತ್ತಿನಲ್ಲಿ ಅಂಗೀಕರಿಸಲಾದ ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ ವಿರುದ್ಧ ಎ 23 ರಮ್ಮಿಯ ಆಪರೇಟರ್ ಆಗಿರುವ ಡಿಜಿಟಲ್ ವರ್ಕ್ಸ್ ಮುಖ್ಯಸ್ಥರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಕೇಂದ್ರ ಸರ್ಕಾರದ ಕಾಯ್ದೆಯ ವಿರುದ್ಧ ಕಂಪನಿಯೊಂದು ನ್ಯಾಯಾಂಗದ ಬಾಗಿಲು ತಟ್ಟಿರುವುದು ಇದೇ ಮೊದಲ ಪ್ರಕರಣವಾಗಿದೆ.

### ಮಸೂದೆಯಲ್ಲಿರುವ ಅಂಶಗಳು

ಮುಂಗಾರು ಅಧಿವೇಶನದಲ್ಲಿ ಅಂಗೀಕರಿಸಿದ ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ 2025, ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳು ಮತ್ತು ರಿಯಲ್ ಮನಿ ಗೇಮ್‌ಗಳ ಮೂಲಕ ಹಣವನ್ನು ಪಣಕ್ಕಿಟ್ಟು ಆಡುವ ಆಟ-ಅದು ಕೌಶಲದ ಆಟವೇ ಆಗಿರಲಿ ಅಥವಾ ಅದೃಷ್ಟದ ಆಟವೇ ಆಗಿರಲಿ- ಅಂತಹ ಆಟಗಳನ್ನು ನಿಷೇಧಿಸುತ್ತದೆ. ಇಂತಹ ಆಟಗಳ ಪರ ಸೆಲೆಬ್ರಿಟಿಗಳ ಜಾಹೀರಾತುಗಳನ್ನು ಸಂಪೂರ್ಣವಾಗಿ ನಿಷೇಧಿಸ ಲಾಗುತ್ತದೆ. ಟಿವಿ, ಡಿಜಿಟಲ್, ಮುದ್ರಣ ಮಾಧ್ಯಮಗಳಲ್ಲಿ ಇನ್ನು ಮುಂದೆ ಆನ್‌ಲೈನ್ ಮನಿ ಗೇಮ್‌ಗಳ ಪ್ರಚಾರ ಮಾಡದಂತೆ ಎಚ್ಚರಿಸಲಾಗಿದೆ. ಜೊತೆಗೆ ಬ್ಯಾಂಕ್‌ಗಳು ಇತರ ಹಣಕಾಸು ಸಂಸ್ಥೆಗಳ ಮೂಲಕ ಅಕ್ರಮ ಹಣ ವರ್ಗಾವಣೆಗೂ ನಿಯಂತ್ರಣ ಹೇರಲಾ ಗಿದೆ. ಕಾನೂನನ್ನು ಉಲ್ಲಂಘಿಸಿದವರಿಗೆ 3 ವರ್ಷದ ವರೆಗೆ ಜೈಲು ಶಿಕ್ಷೆ ಮತ್ತು 1 ಕೋಟಿ ರೂ. ವರೆಗೆ ದಂಡ ವಿಧಿಸಬಹುದು ಎಂದು ಕಾನೂನು ಹೇಳುತ್ತದೆ.

## ವಸತಿ ಯೋಜನೆ ಅಕ್ರಮ: ಪಿಡಿಒ ಸಸ್ಪೆಂಡ್

• ಪ್ರಜೋದಯ ವರದಿ



**ಹಾಸನ:** ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ) ಲಾಗಿನ್ ದುರುಪಯೋಗ ಪಡಿಸಿಕೊಂಡು ಫಲಾನುಭವಿಗಳಿಗೆ ವಂಚನೆ ಮಾಡಿದ ಆರೋಪದ ಹಿನ್ನಲೆ ಬಾಣಾವರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್.ಕುಮಾರಸ್ವಾಮಿ ಅವರನ್ನು ಅಮಾನತುಗೊಳಿಸಲಾಗಿದೆ.

ಕುಮಾರಸ್ವಾಮಿ ಅವರು ಪಿಎಂಎವೈ ವಸತಿ ಯೋಜನೆಯಲ್ಲಿ ತಾಲ್ಲೂಕು ಲಾಗಿನ್ ಅನ್ನು ದುರುಪಯೋಗಪಡಿಸಿಕೊಂಡು ಬಾಣಾವರ ಗ್ರಾಮ ಪಂಚಾಯಿತಿಯ 90 ಅನರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಯೋಜ ನೆಯ ಒಟ್ಟು 27 ಲಕ್ಷ ರೂ. ಹಣವನ್ನು ಮೊದಲ ಕಂತಿನ ಅನುದಾನವನ್ನು ಅರಸೀಕೆರೆಯ ತಾಲ್ಲೂಕು ವಸತಿ ನೋಡಲ್ ಅಧಿಕಾರಿ ಪಾಲಾಕ್ಷ ಹಾಗು ಜಿಲ್ಲಾ ನೋಡಲ್ ಅಧಿಕಾರಿ (ಹೆಚ್ಚುವರಿ ಪ್ರಭಾರ) ಎಂ.ಕೆ. ರಾಜೇಶ್ ಅವ ರೊಂದಿಗೆ ಸೇರಿ ಅನರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿ ಕರ್ತವ್ಯ ಲೋಪವೆಸಗಿದ್ದಾರೆ.

ಈ ಬಗ್ಗೆ ಅಧಿಕಾರಿ ಹಾಗು ಸಿಬ್ಬಂದಿ ಮೇಲೆ ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿರುವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅವರು ವರದಿ ಆಧಾರದ ಮೇಲೆ ಕರ್ತವ್ಯ ಲೋಪ ವೆಸಗಿದ ಪಿಡಿಒ ಕುಮಾರಸ್ವಾಮಿ ಅವರನ್ನು ಶನಿವಾರ ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಹಾಗು ಅರಸೀಕೆರೆ ತಾಲ್ಲೂಕು ವಸತಿ ನೋಡಲ್ ಅಧಿಕಾರಿ ಪಾಲಾಕ್ಷ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಆದೇಶಿಸಿದ್ದಾರೆ.

## ಧರ್ಮಸ್ಥಳಕ್ಕೆ ಇಂದು ಜೆಡಿಎಸ್ ಸತ್ಯಯಾತ್ರೆ

• ಪ್ರಜೋದಯ ವರದಿ




**ಹಾಸನ:** ಧರ್ಮಸ್ಥಳ ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ಖಂಡಿಸಿ ಜೆಡಿಎಸ್ ವತಿಯಿಂದ ಆ.31ರ ಭಾನುವಾರ ಸತ್ಯ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ, ಸುರೇಶ್ ಬಾಬು ಅವರು ಭಾಗವಹಿಸಲಿದ್ದು ಬೆಳಿಗ್ಗೆ 8 ಗಂಟೆಗೆ ಕಂದಲಿಯ ಯಗಚಿ ಶಾಲಾ ಆವರಣದಲ್ಲಿ ಎಲ್ಲರಿಗೂ ಉಪಹಾರದ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯಿಂದ 5 ಸಾವಿರ ಕಾರ್ಯಕರ್ತರು ಪಾಲ್ಗೊಳ್ಳಲಿದ್ದು ಎಲ್ಲರೂ ಅವರವರ ವಾಹನದಲ್ಲೇ ಬರುತ್ತಾರೆ. ಪಕ್ಷದಿಂದ ಯಾವ ಖರ್ಚನ್ನು ಯಾತ್ರೆಗಾಗಿ ವಿನಿಯೋಗಿಸುತ್ತಿಲ್ಲ. ಶ್ರೀ ಮಂಜುನಾಥಸ್ವಾಮಿ ಭಕ್ತರು ಸ್ವಯಂ ಪ್ರೇರಣೆಯಿಂದ ಬರುತ್ತಾರೆ. ಸಕಲೇಶಪುರ ಹಾಗು ಬೇಲೂರಿನ ಕಾರ್ಯಕರ್ತರು ಅಲ್ಲಿಂದಲೇ ತೆರಳುವುದರಿಂದ ಅವರು ಹಾಸನಕ್ಕೆ ಬರುವುದಿಲ್ಲ. ಉಳಿದ ತಾಲ್ಲೂಕಿನ ಕಾರ್ಯಕರ್ತರು ಕಂದಲಿಯಲ್ಲಿ ಸಮಾವೇಶಗೊಂಡು ಒಟ್ಟಾಗಿ ಪ್ರಯಾಣಿಸುತ್ತೇವೆಂದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಧರ್ಮಸ್ಥಳದ ಪಾವಿತ್ರ್ಯ ಹಾಗು ಧರ್ಮಾ ಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ವ್ಯಕ್ತಿತ್ವ ಹಾಳು ಮಾಡಲು ಯಾರೆಲ್ಲ ಕಿಡಿಗೇಡಿಗಳು ಪ್ರಯತ್ನ ಮಾಡಿದ್ದರೋ, ಅವರಲ್ಲಿ ಕೆಲವರ ಬಂಧನ ಆಗಿದೆ. ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತಿರುವವರ ಮುಖವಾಡ ಕಳಚಬೇಕು. ಎಸ್‌ಐಟಿ ಮಾತ್ರವಲ್ಲದೆ ಎನ್‌ಐಎ ತನಿಖೆ ಮೂಲಕ ಷಡ್ಯಂತ್ರದ ರೂವಾರಿಗಳನ್ನು ಬಯಲಿಗೆ ತರಬೇಕೆಂದು ಒತ್ತಾಯಿಸಿದರು.

ಧರ್ಮಸ್ಥಳದ ನೇತ್ರಾವತಿ ಬಳಿ ವಾಹನಗಳ ಪಾರ್ಕಿಂಗ್ ಮಾಡಿ ಬಳಿಕ ಕಾಲ್ನಡಿಗೆಯಲ್ಲಿ ದೇವಸ್ಥಾನಕ್ಕೆ ತೆರಳಿ ಮಂಜುನಾಥನ ಆಶೀರ್ವಾದ ಪಡೆಯಲಾಗುವುದು. ನಂತರ ವಿರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿದ ಬಳಿಕ ಸಾರ್ವಜನಿಕ ಸಮಾರಂಭದಲ್ಲಿ ಪಾಲ್ಗೊಳ್ಳಲಾಗುವುದು ಎಂದರು. ಸುದ್ದಿಗೋಷ್ಟಿಯಲ್ಲಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಎಸ್.ದ್ಯಾವೇಗೌಡ, ವಕೀಲ ಮಂಜುನಾಥ್, ಶೇಷಾದ್ರಿ ಇದ್ದರು.


# ಪುಟ್ಟ ಮಕ್ಕಳ ಜಗಳಕ್ಕೆ ತಂದೆಯ ಕೊಲೆ

## ಆರೋಪಿ ಮನೆ ಜಖಂಗೊಳಿಸಿ, ಕಾರಿಗೆ ಬೆಂಕಿ ಹಾಕಿ ಮೃತನ ಸಂಬಂಧಿಕರು ಆಕ್ರೋಶ | ಮುಜಾವರ್ ಮೊಹಲ್ಲಾ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡ

• ಪ್ರಜೋದಯ ವರದಿ

**ಅರಸೀಕೆರೆ:** ಪುಟ್ಟಮಕ್ಕಳ ಜಗಳ ತಂದೆ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ನಗರದ ಮುಜಾವರ್ ಮೊಹಲ್ಲಾದಲ್ಲಿ ನಡೆದಿದೆ. ಹತ್ಯೆಯಿಂದ ರೊಚ್ಚಿಗೆದ್ದ ಮೃತನ ಸಂಬಂಧಿಕರು ಹಾಗು ಸ್ನೇಹಿತರು ಆರೋಪಿಯ ಮನೆ ಜಖಂಗೊಳಿಸಿ ಕಾರಿಗೆ ಬೆಂಕಿ ಹಚ್ಚಿ ದಾಂಧಲೆ ನಡೆಸಿದ್ದಾರೆ.

ನಗರದ ಮುಜಾವರ್ ಮೊಹಲ್ಲಾ ನಿವಾಸಿ ತೌಫಿಕ್ (28) ಕೊಲೆಯಾದ ವ್ಯಕ್ತಿ. ಫರಾನ್ ಪ್ರಮುಖ ಕೊಲೆ ಆರೋಪಿ. ಸದ್ಯ ಬಡಾವಣೆಯಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದ್ದು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಘಟನೆ ಸಂಬಂಧ 9 ಮಂದಿ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.



**ಏನಿದು ಘಟನೆ**

ವೆಲ್ಡಿಂಗ್ ಕೆಲಸ ಮಾಡುವ ತೌಫಿಕ್ ಪುತ್ರ ಹಾಗು ಫರಾನ್ ಪುತ್ರ ಅರಸೀಕೆರೆಯ ಖಾಸಗಿ ಶಾಲೆಯಲ್ಲಿ ಒಂದನೇ ತರಗತಿ ಓದುತ್ತಿದ್ದಾರೆ. ಕಳೆದ ವಾರ ಶಾಲೆಯಲ್ಲಿ ಫರಾನ್ ಪುತ್ರ ಜ್ವರದಿಂದ ಬಳಲುತ್ತಿದ್ದ ಸಂದರ್ಭದಲ್ಲಿ, ತೌಫಿಕ್ ಪುತ್ರ ಆತನಿಗೆ ನೀರು ಎರಚಿದ್ದಾನೆ. ವಿಷಯವನ್ನು ಬಾಲಕ ತೌಫಿಕ್‌ಗೆ ತಿಳಿಸಿದ್ದಾನೆ.

ಆ.25 ರಂದು ಮಗನಿಗೆ ಇಡ್ಲಿ ತರಲು ಬಿ.ಹೆಚ್.ರಸ್ತೆಯಲ್ಲಿರುವ ಹೋಟೆಲ್‌ಗೆ ಬಂದಿದ್ದ ವೇಳೆ ಲಸ್ಸಿ ಪಾಯಿಂಟ್ ಬಳಿ ತೌಫಿಕ್ ಹಾಗು ಫರಾನ್ ಮುಖಾಮುಖಿಯಾಗಿದ್ದಾರೆ. ನಿನ್ನ ಪುತ್ರ ಜ್ವರದಿಂದ ಬಳಲುತ್ತಿದ್ದ ನನ್ನ ಮಗನಿಗೆ ತಣ್ಣೀರು ಎರಚಿದ್ದಾನೆ ಅವನಿಗೆ ಬುದ್ದಿ ಹೇಳು ಎಂದಿದ್ದಾನೆ. ಅಷ್ಟಕ್ಕೇ ಇಬ್ಬರ ನಡುವೆ ವಾಗ್ವಾದ ನಡೆದಿದೆ. ಅದರಿಂದ ಕೋಪಗೊಂಡ ಫರಾನ್ ತನ್ನ ಜೊತೆಗಿದ್ದ ಅರ್ಮಿನ್, ಫೈರೋಜ್, ಇರ್ಮಾನ್, ಸಲ್ಮಾನ್, ಆಟೋ ಅಡ್ಡು, ಗೌಸ್, ನೂರ್, ಮುನ್ನ ಜೊತೆ ಸೇರಿ ತೌಫಿಕ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ತಳಿದ್ದಾರೆ. ಸುಮಾರು 7 ಎತ್ತರದಿಂದ ತೌಫಿಕ್ ಮೆಟ್ಟಿಲುಗಳ ಮೇಲೆ ಬಿದ್ದಿದ್ದು ತಲೆಗೆ ಬಲವಾದ ಪೆಟ್ಟು ಬಿದ್ದಿದೆ.

ವಿಷಯ ತಿಳಿದು ಸ್ಥಳಕ್ಕೆ ಬಂದು ತೌಫಿಕ್ ಸಹೋದರ ತನ್ವೀರ್‌ಗೂ ಮನಬಂದಂತೆ ಥಳಿಸಿ ತೆರಳಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ತೌಫಿಕ್‌ನನ್ನು ಹಾಸನ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ನಂತರ ನಿಮಾನ್ಸ್‌ಗೆ » ನಾಲ್ಕನೇ ಪುಟದಲ್ಲಿ

### ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮವಾಗಲಿ

ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಮಾರಣಾಂತಿಕ ಹಲ್ಲೆ ಆಗಿದ್ದರೂ ಪ್ರಕರಣ ದಾಖಲು ಮಾಡಿಲ್ಲ. ಹಲ್ಲೆ ಮಾಡಿದ ಆರೋಪಿಗಳನ್ನೂ ಕೂಡಲೇ ಬಂಧಿಸದೆ ಘಟನೆ ಆದ ಮೇಲೆ ಪ್ರಕರಣ ಹಾಗು ಪ್ರತಿ ದೂರು ದಾಖಲಿಸಿಕೊಂಡು ಬಿಟ್ಟು ಕಳುಹಿಸಿದ್ದಾರೆ. ಕೊಲೆಯಾದ ತೌಫಿಕ್ ಒಳ್ಳೆಯ ಹುಡುಗನಾಗಿದ್ದು, ಹಲ್ಲೆ ಮಾಡಿದ ಕಡೆಯವರು ಪ್ರಭಾವಿಗಳಿದ್ದಾರೆ. ಬಡ ಕುಟುಂಬ ಮನೆಯ ಯಜಮಾನನ್ನು ಕಳೆದುಕೊಂಡು ಅನಾಥವಾಗಿದೆ. ಆ ಕುಟುಂಬಕ್ಕೆ ನಾನೇ ಖುದ್ದು ನಿಂತು ನೆರವು ನೀಡುತ್ತೇನೆ. ಇನ್ಸ್‌ಪೆಕ್ಟರ್ ವಿರುದ್ಧ ಹಲವು ದೂರಗಳಿದ್ದು ಆತ ಮತ್ತೆ ಅರಸೀಕೆರೆಗೆ ಕಾಲಿಡಕೂಡದು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಆಗಲಿ ಎಂದು ಒತ್ತಾಯಿಸಿದರು.

## ಹೊಡೆದಾಡಿಕೊಂಡ ಹಿರೀಸಾವೆ-ಶಿವರ ಪಿಡಿಓ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕುಡಿದ ಅಮಲಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಬ್ಬರು ಪರಸ್ಪರ ಹೊಡೆದಾಡಿಕೊಂಡಿರುವ ಘಟನೆ ತಾಲ್ಲೂಕಿನ ಗೋವಿನಕೆರೆ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರ ಮನೆಯಲ್ಲಿ ಆ.28ರಂದು ನಡೆದಿದೆ.

ಹಿರೀಸಾವೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸತೀಶ ಹಾಗು ಎಂ.ಶಿವರ ಗ್ರಾಮ ಪಂಚಾಯಿತಿ ಪಿಡಿಓ ರಾಮಸ್ವಾಮಿ ನಡುವೆ ಜಗಳ ನಡೆದಿದೆ. ಸತೀಶ ಅವರ ತಲೆಗೆ ಮದ್ಯದ ಬಾಟಲಿಯಿಂದ ರಾಮಸ್ವಾಮಿ ಹೊಡೆದಿದ್ದಾರೆ. ಸತೀಶ ಅವರಿಗೆ ಗಂಭೀರ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**ಘಟನೆ ವಿವರ**

ಎಂ.ಶಿವರ ಗ್ರಾಮ ಪಂಚಾಯಿತಿ ಸದಸ್ಯ, ಗೋವಿನಕೆರೆ ಗ್ರಾಮದ ರಾಮು ಅವರ ಮನೆಗೆ ಗಣೇಶ ಹಬ್ಬದ ನಿಮಿತ್ತ ಊಟಕ್ಕೆಂದು ಸತೀಶ ಬಂದಿದ್ದರು. ರಾಮು, ರಘು ಅವರು ಮದ್ಯ ಸೇವನೆ ಮಾಡುತ್ತಾ ಕುಳಿತಿದ್ದಾಗ ಆಹ್ವಾನದ ಮೇರೆಗೆ ರಾಮಸ್ವಾಮಿ ಸಹ ಬಂದಿದ್ದರು. ತಾಲ್ಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆ ವಿಚಾರವಾಗಿ ಅಧಿಕಾರಿಗಳಿಬ್ಬರ ನಡುವೆ ವೈಮನಸ್ಸು ಉಂಟಾಗಿ ಮಾತನಾಡುತ್ತಿರಲಿಲ್ಲ. ಮದ್ಯ ಸೇವನೆ ಮಾಡುತ್ತಾ ಕುಳಿತಿದ್ದಾಗ ರಾಮು, ಶಿವರಾಜ್ ಅವರು ಜಗಳ ಬಿಟ್ಟು ಇಬ್ಬರು ಮಾತನಾಡಿಕೊಂಡಿರಿ ಎಂದು ಸಲಹೆ ನೀಡಿದ್ದಾರೆ. ಅದಕ್ಕೆ ಸತೀಶ್, ಅದರ ಬಗ್ಗೆ ಈಗ ಮಾತನಾಡುವುದು ಬೇಡ ಸುಮ್ಮನಿರಿ ಎಂದಿದ್ದಾರೆ. ಅಷ್ಟಕ್ಕೆ ಆಕ್ರೋಶಗೊಂಡ ರಾಮಸ್ವಾಮಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಎದುರಿಗೆ ಇದ್ದ 750 ಎಂ.ಎಲ್.ನ ಮ್ಯಾನ್ಷನ್ ಹೌಸ್ ಬ್ರಾಂಡಿ ಗಾಜಿನ ಬಾಟಲಿಯಿಂದ ತಲೆಗೆ ಹೊಡೆದಿದ್ದಾರೆ. ಗಾಜಿನ ಚೂರು ಮುಖಕ್ಕೆ ಬಿದ್ದು ಏಟಾಗಿದೆ. ಜೊತೆಗಿದ್ದವರೂ ಜಗಳ ಬಿಡಿಸಿ ಇಬ್ಬರನ್ನೂ ಅಲ್ಲಿಂದ ಕಳುಹಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿದ್ಯುತ್ ತಂತಿ ತಗುಲಿ ಮರದಲ್ಲಿ ಬೆಂಕಿ

## ನೂರಾರು ವಿದ್ಯಾರ್ಥಿಗಳ ಜೀವಕ್ಕೆ ಭೀತಿ | ತಕ್ಷಣ ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ



**ಸಕಲೇಶಪುರ:** ತಾಲ್ಲೂಕಿನ ಬಾಗೆಯ ಸರ್ಕಾರಿ ಶಾಲೆಯ ಪಕ್ಕದ ದೊಡ್ಡ ಮರಕ್ಕೆ ವಿದ್ಯುತ್ ತಂತಿ ತಗುಲಿರುವ ಪರಿಣಾಮ ಮರದಲ್ಲಿ ನಿರಂತರವಾಗಿ ವಿದ್ಯುತ್ ಹರಿದು ಬೆಂಕಿ ಹೊತ್ತಿ ಉರಿಯುತ್ತಿದೆ.

ಈ ಶಾಲೆಯಲ್ಲಿ ಓದುತ್ತಿರುವ ನೂರಾರು ವಿದ್ಯಾರ್ಥಿಗಳು ಯಾವುದೇ ಸಂದರ್ಭದಲ್ಲಿ ಈ ಭಾಗಕ್ಕೆ ಬಂದು ಮರವನ್ನು ಮುಟ್ಟಿದರೆ, ಗಂಭೀರ ಅಪಘಾತ ಸಂಭವಿಸುವ ಭೀತಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗು ಪೋಷಕರಲ್ಲಿ ಉಂಟಾಗಿದೆ. ಮಕ್ಕಳ ಸುರಕ್ಷತೆ ಗಾಗಿ ಸೆಸ್ಕಾಂ ಅಧಿಕಾರಿಗಳು ಹಾಗು ಅರಣ್ಯ ಇಲಾಖೆ ತಕ್ಷಣವೇ ಗಮನಹರಿಸಿ ಕ್ರಮ ಕೈಗೊಳ್ಳ ಬೇಕು. ಸಮಸ್ಯೆ ಯನ್ನು ಬಗೆ ಹರಿಸುವಲ್ಲಿ ತಡವಾದರ ಮಕ್ಕಳ ಜೀವಕ್ಕೆ ಅಪಾಯ ವಾಗಬಹುದೆಂದು ಎಚ್ಚರಿಸಿದ್ದಾರೆ.

ಮಲೆನಾಡು ಪ್ರದೇಶದಲ್ಲಿ ವಿದ್ಯುತ್ ತಂತಿಗಳಿಂದ ಅನಾಹುತಗಳು ಆಗಾಗ್ಗೆ ಸಂಭವಿಸುತ್ತಲೇ ಇವೆ. ಕಳೆದ ಕೆಲ ವರ್ಷಗಳಲ್ಲಿ ವಿದ್ಯುತ್ ತಂತಿ ತಗುಲಿ ಜನರು, ಸಾಕು ಪ್ರಾಣಿಗಳು ಹಾಗು ಕಾಡುಪ್ರಾಣಿಗಳು ಸಾವನ್ನಪ್ಪಿದ ಘಟನೆಗಳು ನಡೆದಿವೆ. ಈ ಹಿನ್ನಲೆ ಬಾಗೆಯ ಸರ್ಕಾರಿ ಶಾಲೆಯ ಬಳಿ ಉಂಟಾಗಿರುವ ಸಮಸ್ಯೆಯನ್ನು ಕೂಡಲೇ ದುರಸ್ತಿಪಡಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಮಲೆನಾಡು ರಕ್ಷಣಾ ಸೇನೆಯ ತಾಲ್ಲೂಕು ಅಧ್ಯಕ್ಷ ಮಂಜುದೇವ್ ಹುಲ್ಲಹಳ್ಳಿ, ಉಪಾಧ್ಯಕ್ಷ ರುತೇಶ್ ಹಾಗೂ ಬಾಗೆ ಘಟಕದ ಕಾರ್ಯಕರ್ತರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಅನಾಹುತ ಸಂಭವಿಸುವ ಮೊದಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಅಮಾಯ ಕರ ಜೀವ ಉಳಿಸುವ ಕೆಲಸ ಮಾಡಬೇಕು. ಆಕಸ್ಮಿಕ ವಾಗಿ ಏನಾದರು ಅನಾಹುತ ಸಂಭವಿಸಿದರೆ ಅಧಿಕಾರಿಗಳೇ ನೇರ ಹೊಣೆ ಎಂದು ಎಚ್ಚರಿಸಿದ್ದಾರೆ.

## ಎಂಸಿಇ ಪ್ರಾಂಶುಪಾಲರಾಗಿ ಡಾ.ಅಮರೇಂದ್ರ

• ಪ್ರಜೋದಯ ವರದಿ



**ಹಾಸನ:** ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಡಾ.ಹೆಚ್.ಜೆ.ಅಮರೇಂದ್ರ ಅವರನ್ನು ಆಯ್ಕೆ ಮಾಡಲಾಗಿದೆ.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್. ಟಿ. ದ್ಯಾವೇಗೌಡ, ಪ್ರಧಾನ ಕಾರ್ಯದರ್ಶಿ ಚೌಡವಳ್ಳಿ ಜಗದೀಶ್, ಖಜಾಂಚಿ ಹೆಚ್.ಪಿ. ಪಾರ್ಶ್ವನಾಥ್ ಅವರು ಅದೇಶ ಪತ್ರ ನೀಡಿದ್ದಾರೆ. ಈ ಹಿಂದೆ ಪ್ರಾಂಶುಪಾಲರಾಗಿದ್ದ ಡಾ.ಕೃಷ್ಣಯ್ಯ ಅವರು ಅಧಿಕಾರ ಹಸ್ತಾಂತರ ಮಾಡಿದರು. ಅಮರೇಂದ್ರ ಅವರು ಮೆಕ್ಯಾನಿಕಲ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಈ ವೇಳೆ ನೂತನ ಪ್ರಾಂಶುಪಾಲರನ್ನು ಅಭಿನಂದಿಸಲಾಯಿತು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ನಿರ್ದೇಶಕರಾದ ಬೂವನಹಳ್ಳಿ ಶ್ರೀನಿವಾಸ್, ಬಿ.ಆರ್. ರಾಜಶೇಖರ್, ನಾಗರಾಜ್ ಜೈನ್, ಶಾಂತಿಗ್ರಾಮ ಶಂಕರ್, ಬಿ.ಎಸ್.ಸುರೇಶ್, ರಿಜಿಸ್ಟರ್ ಕುಮುದ, ಅಧೀಕ್ಷಕರಾದ ಆರ್. ರಘು, ಪ್ರಸಾದ್, ಬಿ.ಆರ್.ರವಿ, ಕಟ್ಟಾಯ ಶಿವಕುಮಾರ್ ಇದ್ದರು.

## 20 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಗ್ರಾಮೀಣ ಭಾಗವು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಮೂಡನಹಳ್ಳಿ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಶನಿವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ತಾವು ಹಿಂದೆ ಭರವಸೆ ನೀಡಿದಂತೆ ನೂತನ ರಸ್ತೆ ಕಾಮಗಾರಿಗೆ 20 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಗ್ರಾಮಸ್ಥರ ಒತ್ತಾಯದಂತೆ ವಿವಿಧ ರಸ್ತೆ ಹಾಗೂ ಒಳಚರಂಡಿ ನಿರ್ಮಾಣಕ್ಕೆ 30 ಲಕ್ಷ ರೂ. ಅನುದಾನ ಒದಗಿಸಲಾಗುವುದು. ಗ್ರಾಮದಲ್ಲಿ ಈಗಾಗಲೇ ದೇವಾಲಯ ನಿರ್ಮಾಣಕ್ಕೆ ಅನುದಾನ ಸೇರಿ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಸಹಕಾರ ನೀಡಲಾಗುವುದು ತಿಳಿಸಿದರು.

ಈ ಭಾಗದ ರೈತರ ಅನುಕೂಲಕ್ಕಾಗಿ ಗ್ರಾಮದಲ್ಲೇ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪನೆ ಮಾಡುವ ಮೂಲಕ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷರಾದ ಬಿ.ಎಚ್.ಶಿವಣ್ಣ ಹಾಗೂ ಮೂಡನಹಳ್ಳಿ ಚಂದ್ರಣ್ಣ ಮಾತನಾಡಿದರು. ಲ್ಯಾಂಡ್ ಆರ್ಮಿ ಇಂಜಿನೀಯರ್ ಪ್ರೀತಮ್, ಚೆಸ್ಕಾಂ ಇಂಜಿನೀಯರ್ ಪ್ರವೀಣ್, ಮುಖಂಡರಾದ ವಿ.ಎನ್.ಮಂಜುನಾಥ್, ಓಬಳಾಪುರ ಬಸವರಾಜ್ ಹಾಗು ಗ್ರಾಮಸ್ಥರು ಹಾಜರಿದ್ದರು.

## ಹಣ ಸುಲಿಗೆಗೆ ನಿಂತಿದ್ದ ಐವರ ಬಂಧನ

**ಹಾಸನ:** ಬೈಕ್ ಸವಾರರನ್ನು ಹೆದರಿಸಿ ಹಣ ಸುಲಿಗೆಗೆ ಹೊಂಚು ಹಾಕುತ್ತಿದ್ದ ಐವರನ್ನು ಬಂಧಿಸಿರುವ ಪೊಲೀಸರು ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಪೆನ್ಷನ್ ಮೊಹಲ್ಲಾ ನಿವಾಸಿಗಳಾದ ತೌಸೀಫ್, ರಿಜ್ವಾನ್, ಫಾರುಕ್, ಚಿಕ್ಕನಾಳು ನಿವಾಸಿ ಉಮ್ರಾಜ್, ಟಿಪ್ಪು ನಗರದ ಅಡ್ಡು ಬಂಧಿತರು.

ದೇವರಾಯಪಟ್ಟಣ ಸೇತುವೆ ಕೆಳಗೆ ಕಬ್ಬಿಣದ ರಾಡ್, ದೊಣ್ಣೆ ಹಿಡಿದು ಮರದ ಕೆಳಗೆ ನಿಂತಿದ್ದ ಅವರು ಬೈಕ್ ಸವಾರರು ಅಥವಾ ಪಾದಚಾರಿಗಳು ಬಂದರೆ ಅವರನ್ನು ತಡೆದು ಹಣ ದೋಚಲು ಸಂಚು ರೂಪಿಸಿ ದ್ದರು. ಗಣೇಶ ವಿಸರ್ಜನಾ ಮೆರವಣಿಗೆ ಕರ್ತ ವ್ಯದಲ್ಲಿದ್ದ ಪೊಲೀಸರಿಗೆ ಸಾರ್ವಜನಿಕ ರಿಂದ ಈ ಬಗ್ಗೆ ಮಾಹಿತಿ ಬಂದ ಹಿನ್ನಲೆ ಸ್ಥಳಕ್ಕೆ ಭೇಟಿ ನೀಡಿದಾಗ ಐವರು ನಿಂತಿದ್ದು ಕಂಡುಬಂದಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆರೋಪ ಸಾಬೀತಾದರೆ ರಾಜಕೀಯ ನಿವೃತ್ತಿ | ಸಂತೋಷ್ ವಿರುದ್ಧ ಮಾನನಷ್ಟ ಮೊಕದ್ದಮೆ

# ವಸತಿ ಯೋಜನೆ ಅಕ್ರಮದಲ್ಲಿ ನನ್ನ ಪಾತ್ರವಿಲ್ಲ: ಕೆಎಂಶಿ

• ಪ್ರಜೋದಯ ವರದಿ



**ಹಾಸನ:** ವಸತಿ ಯೋಜನೆ ಮನೆ ಹಂಚಿಕೆಯಲ್ಲಿ ಅಕ್ರಮವಾಗಿರುವುದು ಸಾಬೀತಾಗಿದ್ದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿದ್ದೇನೆ. ಆದರೆ ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಪ್ರಕರಣದಲ್ಲಿ ನನ್ನ ಹೆಸರು ತಳುಕು ಹಾಕಿ ತೇಜೋವಧೆ ಮಾಡುತ್ತಿದ್ದಾರೆಂದು ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ 94 ಮನೆಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಈ ಸಂಬಂಧ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನನ್ನ ಗಮನಕ್ಕೆ ಬಾರದೆ ನಡೆದಿರುವ ಅಕ್ರಮದಲ್ಲಿ ನಾನು ಶಾಮೀಲಾಗಿದ್ದೇನೆಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ. ಮಾನ, ಮರ್ಯಾದೆ ಇದ್ದರೆ ಸೂಕ್ತ ದಾಖಲಾತಿ ಸಮೇತ ಮಾತನಾಡಬೇಕು. ಪಿಡಿಒ ಯಾರೆಂದು ನನಗೆ ಗೊತ್ತಿಲ್ಲ, ಈ ಹಿಂದೆ ಕರ್ತವ್ಯ ಲೋಪ ಆರೋಪ ದಡಿ ಚುನಾವಣಾ ಆಯೋಗ ಆತನನ್ನು ಅಮಾನತು ಮಾಡಿತ್ತು. ಅಂತಹ ವರ ಸಹವಾಸ ನಾನು ಇಟ್ಟು ಕೊಳ್ಳುವುದಿಲ್ಲ. ಎನ್.ಆರ್.ಸಂತೋಷ್ ಮಾತನಾಡುವ ಮುನ್ನ ಪೂರ್ವಾಪರ ತಿಳಿದಿರ ಬೇಕೆಂದು ತಿರುಗೇಟು ನೀಡಿದರು.

ಜಿಲ್ಲಾ ಪಂಚಾಯಿತಿ ಹಂಗಾಮಿ ನೌಕರ ರಾಜೇಶ್ ಎಂಬಾತನ ಕುಮ್ಮಕ್ಕಿನಿಂದ ಜಿಲ್ಲಾದ್ಯಂತ ಈ ಅಕ್ರಮ ನಡೆದಿದೆ. ಒಂದೇ ಲಾಗಿನ್ ಬಳಸಿ ನಕಲಿ ಫಲಾನುಭವಿಗಳ ಪಟ್ಟಿ ಸೃಷ್ಟಿಸಿ ಮೇಲಾಧಿಕಾರಿಗಳ ದಿಕ್ಕುತಪ್ಪಿಸಿ ಅಕ್ರಮ ಎಸಗಿದ್ದಾರೆ. ಅರಸೀಕೆರೆ ತಾಲ್ಲೂಕಿನ ಬಾಣಾವರ ಗ್ರಾಮ ಪಂಚಾಯಿತಿ ಯಲ್ಲಿ ಮಾತ್ರ ಅವ್ಯವಹಾರ ನಡೆದಿದೆ. ಉಳಿದ 35 ಗ್ರಾಮ ಪಂಚಾಯಿತಿಯಲ್ಲಿ ಈ ರೀತಿ ಆಗಿಲ್ಲವೆಂದರು.

**ರಾಜಕೀಯ ನಿವೃತ್ತಿ ಸವಾಲು**

ವಸತಿ ಯೋಜನೆ ಅಕ್ರಮದಲ್ಲಿ ಭಾಗಿಯಾಗಿರುವುದು ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆಯುವೆ ಎಂದಿದ್ದೇನೆ, ಬಾಣಾವರ ಗ್ರಾಮ ಪಂಚಾಯಿತಿ ಪಿಡಿಒ ನಿಯೋಜನೆಗೆ ಶಿಫಾರಸು ಮಾಡಿಲ್ಲ. ಮೌಖಿಕ ಸೂಚನೆ ಯನ್ನೂ ಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ಮಾನ ಮರ್ಯಾದೆ ಇಲ್ಲದೆ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ಹಾಸನದಲ್ಲಿ ಜೆಡಿಎಸ್ ಮುಖಂಡ ಎಂದು ಹೇಳಿಕೊಳ್ಳುವ ಆತ ಬೆಂಗಳೂರು, ದೆಹಲಿಯಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಜೊತೆಗಿರುತ್ತಾನೆ. ಆತನ ಪಕ್ಷ ಯಾವುದೆಂಬುದು ಗೊಂದಲವಿದೆ. ಬಾಣಾ ವರ ಗ್ರಾಮ ಪಂಚಾಯಿತಿ ಅಧ್ಯಕ್ಷ ಜೆಡಿಎಸ್ ಬೆಂಬಲಿತರಾಗಿದ್ದಾರೆ. ಅಕ್ರಮ ನಡೆದಿರುವ ಕುರಿತು ಅವರಿಗೆ ಗೊತ್ತಿರುವುದಿಲ್ಲವೇ, ಇಲ್ಲಿ ಶಾಸಕರ ಪಾತ್ರ ಏನಿದೆ ಎಂಬುದನ್ನು ತಿಳಿಯುವ ತಾಳ್ಮೆ ಇರಬೇಕಿತ್ತಲ್ಲವೇ ಎಂದು ಗುಡುಗಿದರು.


**ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ನಡೆದ ಅಕ್ರಮಕ್ಕೂ ನನಗೂ ಸಂಬಂಧವಿಲ್ಲ. ಎನ್.ಆರ್.ಸಂತೋಷ್ ಆಧಾರ ರಹಿತ ಆರೋಪ ಮಾಡುತ್ತಿರುವುದರಿಂದ ಮನಸ್ಸಿಗೆ ನೋವಾಗಿದೆ. ಸೋಮವಾರ ಹೈಕೋರ್ಟ್‌ನಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ.**

**-ಕೆ.ಎಂ.ಶಿವಲಿಂಗೇಗೌಡ,** ಶಾಸಕ

### ಸಾಮಾಜಿಕ ಜಾಲತಾಣದಲ್ಲಿ ಅವಹೇಳನ

ಸಾಮಾಜಿಕ ಜಾಲತಾಣಗಳಲ್ಲಿ ನನ್ನ ವಿರುದ್ಧ ಇಲ್ಲಸಲ್ಲದ ಅಪಪ್ರಚಾರ ಮಾಡಲಾಗುತ್ತಿದೆ. ನನ್ನನ್ನು ರಾಗಿ ಕಳ್ಳ, ಮನೆ ಕಳ್ಳ ಅಂತೆಲ್ಲ ಮೂದಲಿಸುತ್ತಿದ್ದಾರೆ. ಅವರಿಗೆ ಮಾನ ಮರ್ಯಾದೆ ಇದೆಯಾ, ಹಿಂದೆ ಇದೇ ಆರೋಪ ಮಾಡಿದ್ದರು. ಧರ್ಮಸ್ಥಳಕ್ಕೆ ಬಂದು ಆಣೆ ಮಾಡು ಎಂದು ಕರೆದಿದ್ದಕ್ಕೆ ಬರಲಿಲ್ಲ, ನಾನು ಹೋಗಿ ಬಂದೆ, ಆತ್ಮಗೌರವ ಇದ್ದಿದ್ದರೆ ಬರುತ್ತಿದ್ದ. ದೇವರ ಆಶೀರ್ವಾದದಿಂದ ನಾನು ಗೆದ್ದಿದ್ದೇನೆ ಆ ವ್ಯಕ್ತಿ ಸೋತಿದ್ದಾನೆಂದರು. ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿರುವುದನ್ನು ಖಂಡಿಸಿ ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಸಂತೋಷ್ ವಿರುದ್ಧ ಪ್ರತಿಭಟನೆಗೆ ಮುಂದಾಗಿದ್ದರು. ನಾನೇ ಎಲ್ಲರನ್ನು ಸಮಾಧಾನ ಪಡಿಸಿದ್ದೇನೆ. ನನ್ನ ವಿರುದ್ಧ ಆರೋಪ ಮಾಡುತ್ತಿರುವುದರಿಂದ ನಾನೇ ಬಗೆಹರಿಸಿಕೊಳ್ಳುತ್ತೇನೆ. ಸೋಮವಾರ ಹೈಕೋರ್ಟ್‌ನಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆಂದು ಎಚ್ಚರಿಕೆ ನೀಡಿದರು.

# ಸಾಟಿ ಇಲ್ಲದ ವ್ಯಕ್ತಿತ್ವದ ಟಿ.ಆರ್.ಶಾಮಣ್ಣ



ಇಂದಿನ ಕೆಲ ನಾಯಕರ ಜತೆ ಶಾಮಣ್ಣನವರನ್ನು ಹೋಲಿಸಿದಾಗ, ಇಂಥ ವ್ಯಕ್ತಿಯೊಬ್ಬರು ಇದ್ದರೆ? ಎಂಬ ಅನುಮಾನ ಹುಟ್ಟುತ್ತದೆ. ಹಣ, ಹೆಂಡ, ತೋಳ್ಬಲದ ಮೇಲೆ ಚುನಾವಣೆ ಗೆಲ್ಲುವ ಹಂತಕ್ಕೆ ಇಂದಿನ ರಾಜಕೀಯ ವ್ಯವಸ್ಥೆ ಮುಟ್ಟಿದೆ. ಆದರೆ ಇಂಥ ಅಪಸವ್ಯಗಳಿಂದ ದೂರವಿದ್ದೂ ಚುನಾವಣೆ ಗೆಲ್ಲಬಹುದು ಎಂಬುದನ್ನು ತೋರಿಸಿಕೊಟ್ಟವರು ಶಾಮಣ್ಣ.

ಅದು 1980ರ ಲೋಕಸಭಾ ಚುನಾವಣೆಯ ಕಾಲಘಟ್ಟ. ರಾಷ್ಟ್ರದ ಮಹಾನ್ ನಾಯಕರುಗಳು ಜನತಾಪಕ್ಷದಿಂದ ಸ್ಪರ್ಧಿಸಿ ಸೋತು ಮನೆ ಸೇರಿದ್ದರೆ, ದಕ್ಷಿಣ ಭಾರತದಿಂದ ಒಬ್ಬರೇ ಒಬ್ಬ ವ್ಯಕ್ತಿ ಲೋಕಸಭೆಯನ್ನು ಪ್ರವೇಶಿಸಿದರು. ಯಾರಪ್ಪಾ ಇವರು? ಎಂಬ ಕುತೂಹಲ ಎಲ್ಲರಲ್ಲೂ ಮನೆ ಮಾಡಿತ್ತು. ಆದರೆ ಸದನವನ್ನು ಪ್ರವೇಶಿಸಿದ ಈ ವ್ಯಕ್ತಿಯ ದೇಹದ ಆಕಾರ ಮತ್ತು ಸರಳ ಉಡುಪನ್ನು ಕಂಡು ಎಲ್ಲರೂ ಹುಬ್ಬೇರಿಸಿದರು.

ದಕ್ಷಿಣ ಭಾರತದಿಂದ, ಅದರಲ್ಲೂ ನಿರ್ದಿಷ್ಟವಾಗಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ, ಡಿ.ಪಿ.ಶರ್ಮ ಎಂಬ ದುಡ್ಡಿನ ಕುಳದ ಎದುರು, ಅಲೆ ಇಲ್ಲದ ಪಕ್ಷದ ವತಿಯಿಂದ ಹೀಗೆ ಸ್ಪರ್ಧಿಸಿ ಗೆದ್ದವರು ಟಿ.ಆರ್. ಶಾಮಣ್ಣ. ಹೀಗಾಗಿ ಅವರು ಅಂದು ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದರು. ಶಾಮಣ್ಣನವರ 35ನೇ ಪುಣ್ಯ ಸ್ಮರಣೆಯ ದಿನವಾದ ಇಂದು (ಆ.30) ಅವರ ಒಂದಿಷ್ಟು ಸಾಧನೆಗಳನ್ನು ಮೆಲುಕು ಹಾಕೋಣ.

ಇಂದು ರಾಜಕಾರಣದಲ್ಲಿ ನಾವು ನೋಡುವ ನಾಯಕರುಗಳ ಅಥವಾ ನಮ್ಮೆದುರು ಕಾಣುವ ಚುನಾಯಿತ ಪ್ರತಿನಿಧಿಗಳ ಜತೆಯಲ್ಲಿ ಶಾಮಣ್ಣನವರ ಬದುಕು ಹಾಗೂ ನಡವಳಿಕೆಯನ್ನು ತುಲನೆ ಮಾಡಿ ನೋಡಿದಾಗ, ಇಂಥ ಒಬ್ಬರು ವ್ಯಕ್ತಿ ಇದ್ದರೆ? ಅವರ ಅಂಥ ಜೀವನಶೈಲಿ ನಿಜವೇ? ಎಂಬ ಅನುಮಾನ ಹುಟ್ಟುತ್ತದೆ. ಹಣ, ಹೆಂಡ, ತೋಳ್ಬಲದ ಆಧಾರದ ಮೇಲೆ ಚುನಾವಣೆಯನ್ನು ಗೆಲ್ಲಬಹುದು ಎನ್ನುವಂಥ ಹಂತಕ್ಕೆ ಇಂದಿನ ರಾಜಕೀಯ ವ್ಯವಸ್ಥೆ ಬಂದು ಮುಟ್ಟಿರುವ ಸಂದರ್ಭದಲ್ಲಿ, ಹಣ-ಹೆಂಡದಂಥ ಅಪಸವ್ಯಗಳಿಂದ ದೂರವಿದ್ದು ಚುನಾವಣೆಯನ್ನು ಗೆಲ್ಲಬಹುದು ಎಂಬುದನ್ನು ತೋರಿಸಿಕೊಟ್ಟವರು ಟಿ.ಆರ್. ಶಾಮಣ್ಣನವರು.

ಬೆಂಗಳೂರು ನಗರದ ಅಭಿವೃದ್ಧಿಯ ಹರಿಕಾರರಲ್ಲಿ ಮೊದಲ ಪಂಕ್ತಿಯಲ್ಲಿ ನಿಲ್ಲುವವರು ಟಿ.ಆರ್. ಶಾಮಣ್ಣ. ಬೆಂಗಳೂರು ನಗರವನ್ನು ಮತ್ತು ತಾವು ಪ್ರತಿನಿಧಿಸುವ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಿರುವುದರ ಬಗ್ಗೆ ಅನೇಕರು ಕೊಚ್ಚಿಕೊಳ್ಳಬಹುದು. ಆದರೆ ನಗರದ ಜನರು ಇಂದಿಗೂ ನೆನಪಿಸಿಕೊಳ್ಳುವುದು ಶಾಮಣ್ಣನವರನ್ನು. ಏಕೆಂದರೆ, ಜನರಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟವರಲ್ಲಿ ಮೊದಲಿಗರು ಶಾಮಣ್ಣನವರು.

ಚುನಾಯಿತ ಪ್ರತಿನಿಧಿಯೊಬ್ಬ ಹೇಗೆ ಕೆಲಸ ಮಾಡಬೇಕು ಎಂಬುದಕ್ಕೆ ಅವರ ದಿನಚರಿಯೇ ಒಂದು ನಿದರ್ಶನ. ಬೆಳಗ್ಗೆ 2 ಗಂಟೆಗಳ ಕಾಲ ಜನರನ್ನು ಭೇಟಿಮಾಡುವುದು, ನಂತರ ಸರಕಾರಿ ಕಚೇರಿಗಳಿಗೆ ಭೇಟಿಯಿತ್ತು ಜನರ ಸಮಸ್ಯೆಗಳ ಕಡೆಗೆ ಗಮನ ನೀಡುವುದು ಇವರ ಕಾರ್ಯ ಚಟುವಟಿಕೆಯ ಮೊದಲ ಭಾಗವಾಗಿತ್ತು. ಮಧ್ಯಾಹ್ನದ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಜಲ ಮಂಡಳಿ, ಮಹಾನಗರಪಾಲಿಕೆ, ಬಹುಮಹಡಿ ಕಟ್ಟಡ, ವಿಧಾನಸೌಧ ಇಲ್ಲೆಲ್ಲಾ ಶಾಮಣ್ಣನವರ ಆಗಮನಕ್ಕಾಗಿ ಜನರು ಪ್ರತಿದಿನ ಕಾಯುತ್ತಿದ್ದರು.

ಆ ವೇಳೆಯಲ್ಲಿ, ಅಧಿಕಾರಿಗಳಿಗೆ ಹೇಳಿ ಜನಸಾಮಾನ್ಯರ ಕೆಲಸವನ್ನು ಮಾಡಿಸಿಕೊಡುವ ಸಲುವಾಗಿ ಈ ಕಚೇರಿಗಳ ಮುಂದೆ ಶಾಮಣ್ಣ ತಮ್ಮ ಆಟೋದಲ್ಲಿ ಬರುತ್ತಿದ್ದರು. ಕಾದಿರುತ್ತಿದ್ದ ಅಧಿಕಾರಿಗಳು ಶಾಮಣ್ಣನವರ ಆಟೋ ಬಂದು ನಿಲ್ಲುತ್ತಿದ್ದಂತೆಯೇ ಅದರೆಡೆಗೆ ಧಾವಿಸಿ, ಶಾಮಣ್ಣನವರಿಂದ ಕಾರ್ಯಸಂಬಂಧಿ ಆದೇಶವನ್ನು ಸ್ವೀಕರಿಸುತ್ತಿದ್ದರು.

ಇದು ಚುನಾಯಿತ ಪ್ರತಿನಿಧಿಯೊಬ್ಬರು ಅನುಸರಿಸಬೇಕಾದಂಥ ಅಧಿಕಾರ ಚಲಾವಣೆಯ ರೀತಿ ಎಂಬುದನ್ನು ಶಾಮಣ್ಣನವರು ಪ್ರತ್ಯಕ್ಷವಾಗಿ ತೋರಿಸುತ್ತಿದ್ದರು. ಜನಸಾಮಾನ್ಯರು ಎಂಥದೇ ಸಮಸ್ಯೆಯನ್ನು ಹೊತ್ತುತಂದರೂ, ಅದನ್ನು ಅಷ್ಟೇ ತಾಳ್ಮೆಯಿಂದ ಕೇಳಿ ಪರಿಹರಿಸಿಕೊಡುತ್ತಿದ್ದ ಶಾಮಣ್ಣ ಅವರ ಬದುಕಿನಲ್ಲಿ ಜಾತಿ-ಮತ ಭೇದಗಳು, ಬಡವ-ಬಲ್ಲಿದ ಎಂಬ ಭಾವಗಳು ಎಂದೂ ಸುಳಿಯಲಿಲ್ಲ, ಭ್ರಷ್ಟಾಚಾರವನ್ನು ನೇರವಾಗಿ ನಿಷ್ಠುರವಾಗಿ ಎದುರಿಸುತ್ತಿದ್ದವರು ಅವರೊಬ್ಬರೇ.

ಸತ್ಯವನ್ನು ಹೇಳಲು ಎಂದೂ ಹಿಂದು-ಮುಂದು ನೋಡದ ಶಾಮಣ್ಣ, ಜನಸಾಮಾನ್ಯರಿಗೆ ತೊಂದರೆಯಾದಾಗ ತಮ್ಮ ಪಕ್ಷ, ತಮ್ಮ ನಾಯಕ ಎಂಬ ಯಾವ ಅಂಶವನ್ನೂ ಪರಿಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಬಡ ಕುಟುಂಬವೊಂದರಲ್ಲಿ ಹುಟ್ಟಿ, ಹೇಳದೆ ಕೇಳದೆ ಮನೆ ಬಿಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ, ಸೆರೆಮನೆಯಿಂದ ಸೆರೆಮನೆಗೆ ಅನೇಕ ವರ್ಷಗಳವರೆಗೆ ಓಡಾಡುತ್ತಾ ಶಿಕ್ಷೆಯನ್ನು ಅನುಭವಿಸಿದವರು ಶಾಮಣ್ಣ.

ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಕಾರಣಕ್ಕೆ ಅವರು ಕಠಿಣ ಶಿಕ್ಷೆಗೆ ಒಳಗಾಗಬೇಕಾಗಿ ಬಂತು; ಆದರೆ ನ್ಯಾಯಾಲಯದಲ್ಲಿ ಈ ತಪ್ಪನ್ನು ಒಪ್ಪಿಕೊಳ್ಳದೆ ಸೆರೆಮನೆ ವಾಸಕ್ಕೆ ಒಡ್ಡಿಕೊಂಡ ಧೈರ್ಯ ಶಾಲಿ ಶಾಮಣ್ಣನವರು. ಹೀಗೆ ತಮ್ಮ ಮನೆಯನ್ನು ಮರೆತು, ಸ್ವಾತಂತ್ರ್ಯ ಚಳವಳಿಯ ವಿವಿಧ ಆಯಾಮಗಳಲ್ಲಿ ತೊಡಗಿದ್ದ ಶಾಮಣ್ಣನವರು ತಮ್ಮ ತಂದೆಯು ಅನಾರೋಗ್ಯಕ್ಕೆ ಒಳಗಾದ ಕಾರಣದಿಂದ ಮನೆಗೆ ಮರಳಿದರು.

ಮನೆಯಲ್ಲಿ ತಾಂಡವವಾಡುತ್ತಿದ್ದ ದುರ್ಭರ ಪರಿಸ್ಥಿತಿಯನ್ನು ಮನಗಂಡ ಶಾಮಣ್ಣ, ಸ್ವಾವಲಂಬನೆಯ ಬದುಕಿಗಾಗಿ ಸ್ವಂತ ಉದ್ಯೋಗವನ್ನು ಆರಂಭಿಸಿದರು. ಯರವಾಡ ಜೈಲಿನಲ್ಲಿದ್ದಾಗ ಅನೇಕ ಮಹತ್ತರ ಘಟನೆಗಳನ್ನು ಹತ್ತಿರದಿಂದ ಕಂಡವರಾಗಿದ್ದ ಶಾಮಣ್ಣ,

ಬದುಕಿನಲ್ಲಿ ಮದ್ಯಪಾನ ಸೇರಿದಂತೆ ಯಾವುದೇ ದುಶ್ಚಟಗಳ ದಾಸನಾಗಬಾರದು. ಯಾವಾಗಲೂ ಸತ್ಯವನ್ನೇ ಹೇಳಬೇಕು, ಸರಳವಾಗಿ ಬದುಕಬೇಕು. ಮಹಾತ್ಮ ಗಾಂಧಿಯವರ ಆಶಯದಂತೆ ಸದಾ ಕಾಲ ಖಾದಿಯನ್ನು ಧರಿಸಬೇಕು ಎಂಬ ನಿಲುವುಗಳಿಗೆ ಬದ್ಧರಾದರು, ಬದುಕಿನ ಕೊನೆಯ ಕ್ಷಣದ ತನಕ ಅವಕ್ಕೆ ಅಂಟಿ ಕೊಂಡಿದ್ದರು.

1957ರಲ್ಲಿ ಬೆಂಗಳೂರು ನಗರಪಾಲಿಕೆಯ ಸದಸ್ಯರಾಗಿ, ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ ಶಾಮಣ್ಣನವರು ಮೂರು ಬಾರಿ ಬಸವನಗುಡಿ ಕ್ಷೇತ್ರದ ಶಾಸಕರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ ದುಡಿದರು. ಭಿಕ್ಷುಕರ ಪರಿಹಾರ ನಿಧಿ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಬಸವನಗುಡಿ ಕ್ಷೇತ್ರದಲ್ಲಿ ಶಾಮಣ್ಣನವರ ಹೆಸರು ಮತಗಳನ್ನು ತಂದುಕೊಡುವ ಶಕ್ತಿಯಾಗಿತ್ತು.

ಶಾಮಣ್ಣ ಹೇಳಿದರೆಂದರೆ ಮತದಾರರು ಅದರ ವಿರುದ್ಧವಾಗಿ ತೀರ್ಪು ನೀಡುತ್ತಿರಲಿಲ್ಲ, ಶಾಮಣ್ಣನವರು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಇಲ್ಲಿ ಗೆಲ್ಲಿಸಿಕೊಳ್ಳುತ್ತಾರೆ ಎಂಬುದು ಆ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ಮಾತಾಗಿತ್ತು. ಕಾರಣ ಇಲ್ಲಿನ ಜನರ ಬದುಕಿನ ಒಂದು ಭಾಗವಾಗಿದ್ದ ನಾಯಕ ಅವರು. ಶಾಮಣ್ಣನವರು 1980ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಗೆದ್ದ ನಂತರ ಬಸವನಗುಡಿ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಿತು.

ಈ ಚುನಾವಣೆಯಲ್ಲಿ ಹುಣಸೂರಿನ ಎಚ್. ಎಲ್.ತಿಮ್ಮೇಗೌಡರು ಜನತಾ ಪಕ್ಷದ ಅಭ್ಯರ್ಥಿಯಾಗಿದ್ದರೆ, ಲಕ್ಷ್ಮಣರಾಯರು ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪರ್ಧಿಸಿದ್ದರು. ಅಂದಿನ ಮುಖ್ಯಮಂತ್ರಿ ಗುಂಡೂರಾಯರು ಈ ಚುನಾವಣೆಯನ್ನು ಪ್ರತಿಷ್ಠೆಯ ಹೋರಾಟವಾಗಿ ಸ್ವೀಕರಿಸಿದ್ದರು. ಆಡಳಿತಾ ರೂಢ ಪಕ್ಷವು ಏನೆಲ್ಲಾ ಒತ್ತಡ, ತಂತ್ರಗಳನ್ನು ಹೂಡಿದರೂ ತಿಮ್ಮೇಗೌಡರ ಪರವಾಗಿಯೇ ಚುನಾವಣಾ ಫಲಿತಾಂಶ ಹೊರಬಿತ್ತು. ಆಗ ಇಲ್ಲಿನ ಜನ ಹೇಳಿದ್ದು, ಈ ಕ್ಷೇತ್ರದಲ್ಲಿ ಶಾಮಣ್ಣನವರ ಮಾತೇ ಅಂತಿಮ,

ಹೀಗಾಗಿಯೇ ತಿಮ್ಮೇಗೌಡರ ಗೆಲುವಾಯಿತು ಅಂತ. 1985ರಲ್ಲಿ, ಜನ ಪ್ರಿಯತೆಯ ಉತ್ತುಂಗದಲ್ಲಿದ್ದ ರಾಮಕೃಷ್ಣ ಹೆಗಡೆಯವರು ಈ ಕ್ಷೇತ್ರದ ಶಾಸಕರಾದರು, ಆದರೆ 1989ರ ವೇಳೆಗೆ ಅವರ ಜನಪ್ರಿಯತೆ ಕುಸಿದಿತ್ತು. ಕ್ಷೇತ್ರದಲ್ಲಿ ಅವರ ವಿರುದ್ಧ ಅನೇಕ ರೀತಿಯ ಅಭಿಪ್ರಾಯಗಳು ಹರಿದಾಡುತ್ತಿದ್ದವು. ಈ ಸಲದ ಚುನಾವಣೆಯಲ್ಲಿ ಹೆಗಡೆಯವರು ಸೋಲುತ್ತಾರೆ ಅಂತ ಪತ್ರಿಕೆಗಳೂ ಅಭಿಪ್ರಾಯಪಟ್ಟಿದ್ದುಂಟು.

ಆದರೆ ಚುನಾವಣೆಯಲ್ಲಿ ಜಯಶೀಲರಾದದ್ದು ಹೆಗಡೆಯವರೇ. ಇದಕ್ಕೆ ಕಾರಣೀ ಭೂತರಾಗಿದ್ದು ಮತ್ತದೇ ಟಿ.ಆರ್. ಶಾಮಣ್ಣನವರು. ರಾತ್ರಿಯ ವೇಳೆಯಲ್ಲಿ ಕೊಳಚೆ ಪ್ರದೇಶಗಳಿಗೆ ಹೋಗಿ, ಅಲ್ಲಿನ ಮತದಾರರನ್ನು ಹೆಸರು ಹಿಡಿದು ಕರೆದು, ಈ ಪಕ್ಷಕ್ಕೆ ಮತ ಹಾಕಿ ಎಂದು ಶಾಮಣ್ಣ ಹೇಳುತ್ತಿದ್ದರು.

ಇಂಥ ಕಡೆಗಳಿಗೆ ರಾತ್ರಿ ವೇಳೆಯಲ್ಲಿ ಹೋಗಲು ಅನೇಕರು ಹೆದರುತ್ತಿದ್ದರು, ಆದರೆ ಶಾಮಣ್ಣನವರಿಗೆ ಯಾವ ಭಯವೂ ಇರಲಿಲ್ಲ. ಕಾರಣ, ಅವರ ಬಗ್ಗೆ ಜನರಲ್ಲಿ ಇದ್ದಂಥ ವಿಶೇಷವಾದ ಗೌರವ! ಒಬ್ಬ ಸಮಾಜ ಸೇವಕರಾಗಿ, ಸಮರ್ಥ ಜನಪ್ರತಿನಿಧಿಯಾಗಿ ಕಾಣುವುದಷ್ಟೇ ಅಲ್ಲದೆ, ಒಬ್ಬ ಜನಪರ ಹೋರಾಟಗಾರರು ಕೂಡ ಆಗಿದ್ದುದು ಶಾಮಣ್ಣನವರ ಹೆಗ್ಗಳಿಕೆ.

ಕುಡಿಯುವ ನೀರು, ವಿದ್ಯುತ್ ಬಿಲ್ಲು, ಬಸ್ ಪ್ರಯಾಣ ದರ, ಮನೆ ಕಂದಾಯ ಹೀಗೆ ಯಾವುದೇ ವಿಚಾರದಲ್ಲಿ ರಾಜ್ಯ ಸರಕಾರವು ಜನವಿರೋಧಿ ನಿಲುವನ್ನು ತಳೆದರೆ, ಶಾಮಣ್ಣನವರ ಪ್ರತಿಭಟನೆಯನ್ನು ಕೂಡಲೇ ಎದುರಿಸ ಬೇಕಾಗಿ ಬರುತ್ತಿತ್ತು. ಅಂದಿನ ಬೆಂಗಳೂರು ನಗರ ಪಾಲಿಕೆಯು ಜನರಿಗೆ ಆಸ್ತಿ ತೆರಿಗೆಯನ್ನು ಹೆಚ್ಚಿಸಿದ ಸಂದರ್ಭದಲ್ಲಿ ವಿಧಾನಸೌಧದ ಮುಂದೆ ಶಾಮಣ್ಣನವರು ಏಕಾಂಗಿಯಾಗಿ ಧರಣಿ ನಡೆಸಿದ್ದಿದೆ.

ಶಾಮಣ್ಣ ಎಂದರೆ ಒಂದು ಶಕ್ತಿ ಎಂಬುದು ಎಲ್ಲರಿಗೂ ತಿಳಿದಿತ್ತು, ಹೀಗಾಗಿ ಅವರ ನಿಷ್ಠುರವನ್ನು ಕಟ್ಟಿಕೊಳ್ಳಲು ಎಲ್ಲರೂ ಹೆದರುತ್ತಿದ್ದರು. ಅವರನ್ನು ಸೈಕಲ್ ಶಾಮಣ್ಣ ಎಂದೂ ಜನರು ಕರೆಯುತ್ತಿದ್ದುದುಂಟು. ದಶಕಗಳ ಹಿಂದೆ ಸೈಕಲ್ ಜನಸಾಮಾನ್ಯರ ಪ್ರಮುಖ ವಾಹನವಾಗಿತ್ತು. ಅದರ ಮೇಲೆ ತೆರಿಗೆಯನ್ನು ವಿಧಿಸಿದ್ದಕ್ಕೆ ದೊಡ್ಡ ಹೋರಾಟವನ್ನೇ ಶಾಮಣ್ಣ ಶುರುವಿಟ್ಟುಕೊಂಡರು.

ಪರಿಣಾಮ ತೆರಿಗೆಯನ್ನು ರದ್ದುಗೊಳಿಸಬೇಕಾಗಿ ಬಂತು. ಹೀಗೆ ಟಿ.ಆರ್.ಶಾಮಣ್ಣನವರ ಬದುಕು ಹಲವು ಹೋರಾಟದ ಪ್ರಸಂಗಗಳನ್ನು ಒಳಗೊಂಡ ಒಂದು ದಂತಕತೆಯಾಗಿದೆ. ಚುನಾವಣೆಯ ವೇಳೆ ಶಾಮಣ್ಣನವರು ಎಂದೂ ಹಣದ ಥೈಲಿಯನ್ನು ಹಿಡಿದು ಆ ಚಟುವಟಿಕೆಯಲ್ಲಿ ತೊಡಗಿದವರಲ್ಲ, ಹೆಂಡವನ್ನು ಹಂಚಿದವರಲ್ಲ. ಅವರ ಇಂಥ ಚುನಾವಣಾ ಪ್ರಚಾರ ವೈಖರಿಯು ಇವತ್ತಿನ ಚುನಾವಣಾ ರಾಜಕಾರಣಕ್ಕೆ ಒಂದು ದಿಕ್ಸೂಚಿಯಾಗಬೇಕು.

ಚುನಾವಣಾ ಸುಧಾರಣೆ ಮಾಡಲು ಬಯಸುವವರು ಶಾಮಣ್ಣನವರ ಈ ವೈಖರಿಯನ್ನು ಒಮ್ಮೆ ಕೂಲಂಕಷ ಅವಲೋಕಿಸಿದರೆ ಸಾಕು, ಎಷ್ಟೋ ವಿಚಾರಗಳು ಅರಿವಿಗೆ ಬರುತ್ತವೆ. ಶಾಮಣ್ಣನವರನ್ನು ಬೆಂಗಳೂರಿನ ಜನರು ಥಟ್ಟನೆ ಗುರುತಿಸುತ್ತಿದ್ದುದು ಅವರು ಓಡಾಡುತ್ತಿದ್ದ ಕರಿಬಣ್ಣದ ಆಟೋರಿಕ್ಷಾದ ಮೂಲಕ. ಅದು ಆಗಾಗ ಓಡಾಡಿದರೆ ನಮ್ಮ ಬಡಾವಣೆಗೆ ಶಾಮಣ್ಣ ಬಂದಿದ್ದಾರೆ ಎಂದು ಜನರು ಸುಲಭವಾಗಿ ಗ್ರಹಿಸುತ್ತಿದ್ದರು.

ತಮ್ಮ ಸೇವಾ ಮನೋಭಾವ, ಪ್ರಾಮಾಣಿಕತೆ, ನೇರವಾದ ನಡವಳಿಕೆಯ ಮೂಲಕ ದಶಕಗಳವರೆಗೆ ಬೆಂಗಳೂರು ನಗರದ, ಅದರಲ್ಲೂ ವಿಶೇಷವಾಗಿ ಬಸವನಗುಡಿ ಭಾಗದ ದೊಡ್ಡ ರಾಜಕೀಯ ಶಕ್ತಿಯಾಗಿದ್ದವರು ಟಿ.ಆರ್.ಶಾಮಣ್ಣ. ಅವರ ನಿಧನದ ನಂತರ ಬೆಂಗಳೂರು ಮಹಾನಗರಿಯಲ್ಲಿ ಜನಪರ ಹೋರಾಟಗಳು, ಅದರಲ್ಲೂ ಪ್ರಮುಖವಾಗಿ ಜನರಿಗೆ ದೊರೆಯ ಬೇಕಾದ ಮೂಲ ಸೌಕರ್ಯ ಸಂಬಂಧಿತ ಹೋರಾಟಗಳು ನಿಂತುಹೋಗಿವೆ.

ಶಾಮಣ್ಣನವರು ಇಂದು ನಮ್ಮ ನಡುವೆ ಇಲ್ಲ. ಆದರೂ ಅವರು ತೊಡಗಿಸಿಕೊಂಡಿದ್ದ ಅನೇಕ ಹೋರಾಟಗಳು, ಬಡಾವಣೆಗಳಲ್ಲಿನ ಅಭಿವೃದ್ಧಿ ಕಾರ್ಯಗಳು ಅವರ ಇರುವಿಕೆಯನ್ನು ಸಾರಿ ಹೇಳುತ್ತವೆ. ಇದೇ ಅಲ್ಲವೇ ಜನಪ್ರತಿಯೊಬ್ಬನ ಸಾರ್ಥಕ ಜೀವನ?

**- ಟಿ.ಎಸ್.ನಾಗರಾಜ್**



> “ದಕ್ಷಿಣ ಭಾರತದಿಂದ, ಅದರಲ್ಲೂ ನಿರ್ದಿಷ್ಟವಾಗಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ, ಡಿ.ಪಿ.ಶರ್ಮ ಎಂಬ ದುಡ್ಡಿನ ಕುಳದ ಎದುರು, ಅಲೆ ಇಲ್ಲದ ಪಕ್ಷದ ವತಿಯಿಂದ ಹೀಗೆ ಸ್ಪರ್ಧಿಸಿ ಗೆದ್ದವರು ಟಿ.ಆರ್. ಶಾಮಣ್ಣ. ಹೀಗಾಗಿ ಅವರು ಅಂದು ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದರು. ಶಾಮಣ್ಣನವರ 35ನೇ ಪುಣ್ಯ ಸ್ಮರಣೆಯ ದಿನವಾದ ಇಂದು (ಆ.30) ಅವರ ಒಂದಿಷ್ಟು ಸಾಧನೆಗಳನ್ನು ಮೆಲುಕು ಹಾಕೋಣ.

### ಶಾಮಣ್ಣನ ಜೀವನ....

- ಮನೆಯಲ್ಲಿ ತಾಂಡವವಾಡುತ್ತಿದ್ದ ದುರ್ಭರ ಪರಿಸ್ಥಿತಿಯನ್ನು ಮನಗಂಡ ಶಾಮಣ್ಣ, ಸ್ವಾವಲಂಬನೆಯ ಬದುಕಿಗಾಗಿ ಸ್ವಂತ ಉದ್ಯೋಗವನ್ನು ಆರಂಭಿಸಿದರು.
- ಯರವಾಡ ಜೈಲಿನಲ್ಲಿದ್ದಾಗ ಅನೇಕ ಮಹತ್ತರ ಘಟನೆಗಳನ್ನು ಹತ್ತಿರದಿಂದ ಕಂಡವರಾಗಿದ್ದ ಶಾಮಣ್ಣ
- ಬದುಕಿನಲ್ಲಿ ಮದ್ಯಪಾನ ಸೇರಿದಂತೆ ಯಾವುದೇ ದುಶ್ಚಟಗಳ ದಾಸನಾಗಬಾರದು.
- ಯಾವಾಗಲೂ ಸತ್ಯವನ್ನೇ ಹೇಳಬೇಕು, ಸರಳವಾಗಿ ಬದುಕಬೇಕು.
- ಮಹಾತ್ಮ ಗಾಂಧಿಯವರ ಆಶಯದಂತೆ ಸದಾ ಕಾಲ ಖಾದಿಯನ್ನು ಧರಿಸಬೇಕು ಎಂಬ ನಿಲುವುಗಳಿಗೆ ಬದ್ಧರಾದರು, ಬದುಕಿನ ಕೊನೆಯ ಕ್ಷಣದ ತನಕ ಅವಕ್ಕೆ ಅಂಟಿ ಕೊಂಡಿದ್ದರು.
- 1957ರಲ್ಲಿ ಬೆಂಗಳೂರು ನಗರಪಾಲಿಕೆಯ ಸದಸ್ಯರಾಗಿ, ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ ಶಾಮಣ್ಣನವರು ಮೂರು ಬಾರಿ ಬಸವನಗುಡಿ ಕ್ಷೇತ್ರದ ಶಾಸಕರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ ದುಡಿದರು.
- ಭಿಕ್ಷುಕರ ಪರಿಹಾರ ನಿಧಿ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

## 31-8-2025 ದಿನ ಭವಿಷ್ಯ

**ಮೇಷ:** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ನಿಮ್ಮ ತೂಕದ ಮೇಲೆ ಹಿಡಿತ ಹೊಂದಿರಿ. ಹಣಕಾಸಿನಲ್ಲಿ ಸುಧಾರಣೆ ಅಗತ್ಯ ವಸ್ತುಗಳನ್ನು ಖರೀದಿಸುವುದನ್ನು ಅನುಕೂಲಕರವಾಗಿಸುತ್ತದೆ. ಸಂಬಂಧಿಗಳು ನಿಮಗೆ ಅನಿರೀಕ್ಷಿತ ಉಡುಗೊರೆ ತಂದರೂ ನೀವೂ ಅವರಿಗೆ ಸಹಾಯ ಮಾಡಬೇಕೆಂದು ನಿರೀಕ್ಷಿಸಬಹುದು. ನೀವು ನಿಮ್ಮ ಜೀವನದಲ್ಲಿ ವಿಶೇಷ ವ್ಯಕ್ತಿಯ ಕೊರತೆ ಅನುಭವಿಸಬಹುದು.

**ವೃಷಭ:** ನಿಮ್ಮ ಕುಟುಂಬದ ಜೊತೆ ನಿಮ್ಮ ಸಮಯವನ್ನು ವ್ಯಯಿಸಿ ಪ್ರತ್ಯೇಕತೆ ಮತ್ತು ಒಂಟಿತನದ ಭಾವನೆಯನ್ನು ತೊಡೆದುಹಾಕಿ. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು, ನೀವು ಅವರಿಗೆ ಹಣವನ್ನು ಸಾಲವಾಗಿ ಕೊಡುತ್ತೀರಿ..

**ಮಿಥುನ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು. ವೈಯಕ್ತಿಕ ಮತ್ತು ಗೌಪ್ಯವಾದ ಮಾಹಿತಿಯನ್ನು ಬಹಿರಂಗಪಡಿಸಬೇಡಿ. ನಿಮ್ಮ ಸಂಗಾತಿಯು ಇಂದು ಇಡೀ ದಿನ ನಿಮ್ಮ ಬಗ್ಗೆ ಚಿಂತಿಸುತ್ತೀರಿ.

**ಕರ್ಕಾಟಕ:** ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ನಿಮ್ಮ ಚೈತನ್ಯವನ್ನು ಬಳಸಿ. ಲೋಕೋಪಕಾರಕ್ಕಾಗಲ್ಲ ದಿದ್ದಲ್ಲಿ ಈ ನಶ್ವರ ದೇಹದ ಉಪಯೋಗವಾದರೂ ಏನು. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ.

**ಸಿಂಹ:** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು. ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ. ಪ್ರಣಯ ಸಂತೋಷಕರವೂ ಮತ್ತು ಅದ್ಭುತವೂ ಆಗಬಹುದು.

**ಕನ್ಯಾ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಈ ರಾಶಿಚಕ್ರಕ್ಕೆ ಸಂಬಂಧಿಸಿದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ವಿಷಯದ ಬಗ್ಗೆ ಹಣವನ್ನು ಖರ್ಚುಮಾಡಬಹುದು ಪಾಲಕರು ಮತ್ತು ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸಲು ಅವರಿಗೆ ಸಾಧ್ಯವಾದದ್ದನ್ನೆಲ್ಲ ಮಾಡುತ್ತಾರೆ.

**ತುಲಾ:** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು. ಇದು ನಿಮ್ಮ ಹಣಕಾಸಿನ ಸ್ಥಿತಿಯನ್ನು ಹದಗೆಡಿಸುತ್ತದೆ ಆದರೆ ಸಂಬಂಧವನ್ನು ಬಲಪಡಿಸುತ್ತದೆ.

**ವೃಶ್ಚಿಕ:** ನಿಮ್ಮ ಮಾನಸಿಕ ಒತ್ತಡವನ್ನು ಹೊಡೆದೋಡಿಸಲು ಆಧ್ಯಾತ್ಮಿಕತೆ ಒಂದು ಅತ್ಯುತ್ತಮ ಆಯ್ಕೆಯಾಗಿರುವುದರಿಂದ ನೀವು ಅದರ ಸಹಾಯ ಪಡೆಯಲು ಈಗ ಒಳ್ಳೆಯ ಸಮಯ. ಧ್ಯಾನ ಮತ್ತು ಯೋಗ ನಿಮ್ಮ ಮಾನಸಿಕ ದೃಢತೆಯನ್ನು ವರ್ಧಿಸುತ್ತವೆ. ಬಹಳ ಪ್ರಯೋಜನಕಾರಿ ದಿನವಲ್ಲ- ಆದ್ದರಿಂದ ನಿಮ್ಮ ಹಣದ ಪರಿಸ್ಥಿತಿಯನ್ನು ಪರಿಶೀಲಿಸಿ

**ಧನು:** ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ - ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ.

**ಮಕರ:** ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ಇಂದು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ. ಕುಟುಂಬದ ಸದಸ್ಯರು ನಿಮ್ಮ ನಿರೀಕ್ಷೆಗಳನ್ನು ಪೂರೈಸದಿರಬಹುದು.

**ಕುಂಭ:** ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ. ನೀವು ಇಂದು ಪ್ರೀತಿ ಮಾಲಿನ್ಯವನ್ನು ಹರಡುತ್ತೀರಿ. ಇಂದು ನೀವು ಪ್ರಮುಖ ಸಮಸ್ಯೆಗಳ ಮೇಲೆ ಗಮನ ನೀಡಬೇಕು.

**ಮೀನ:** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ-ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ನೆರೆಮನೆಯವರ ಜೊತೆಗಿನ ಜಗಳ ನಿಮ್ಮ ಮನಸ್ಸು ಕೆಡಿಸುತ್ತದೆ. ಆದರೆ ನಿಮ್ಮ ಸಹನೆ ಕಳೆದುಕೊಳ್ಳಬೇಡಿ, ಏಕೆಂದರೆ ಇದು ಬೆಂಕಿಗೆ ತುಪ್ಪ ಸುರಿಯುತ್ತದೆ. ನೀವು ಸಹಕರಿಸದಿದ್ದಲ್ಲಿ ಯಾರೂ ನಿಮ್ಮ ಜೊತ ಜಗಳ ಮಾಡಲು ಸಾಧ್ಯವಿಲ್ಲ.

## ಗೋಸುಂಬೆ

ಬೆಳಗಿನ ತಿಂಡಿ ತಯಾರಿಸುವುದರಲ್ಲಿ ನಿರತಳಾಗಿದ್ದ ಅರುಣಾಳಿಗೆ ಕೆಲಸದ ರಂಗಮ್ಮನ ಕೂಗು ಕೇಳಿಸಿತು. ಅವ್ವಾ, ನನ್ನ ಕೆಲಸಗಳೆಲ್ಲ ಮುಗಿಯಿತು. ತಿಂಡಿ ಆಗಿದ್ರೆ ಕೊಡಿ, ಇಲ್ಲದಿದ್ದರೆ ಬ್ಯಾಡ ಎಂದಳು.

ಬಂದೆ ತಾಳೇ ಒಂದೇ ನಿಮಿಷ ರಂಗೀ, ಆಗೇ ಹೋಯ್ತು. ಅಕ್ಕಿತರಿ ಅವರೇಕಾಳು ಉಪ್ಪಿಟ್ಟು ಇವತ್ತು, ನಿನ್ನ ಮಗಳು ಬೇರೆ ಊರಿನಿಂದ ಬರುತ್ತಾಳೆ ಅಂದಿದ್ದೆ. ಅವಳಿಗೂ ಸೇರಿಸಿ ಮಾಡಿದ್ದೇನೆ ಕೊಡುತ್ತೇನೆ ಎಂದಳು ಅರುಣಾ ಅಡುಗೆ ಮನೆಯಿಂದ.

ಓ ! ಅವರೇಕಾಳು ಉಪ್ಪಿಟ್ಟಾ ಆಯಿತು ಒಂದು ಡಬ್ಬಿಗೆ ಹಾಕಿಕೊಟ್ಟುಬಿಡಿ. ಅಂದಹಾಗೆ ನಿಮ್ಮ ಮಗಳೂ ಅಮ್ಮು ಬರುತ್ತಾಳೆ ಅಂದಿದ್ದಿರಿ. ಯಾವಾಗ ಏಟೊತ್ತಿಗೆ ಬರ್ತಾರೆ? ಎಂದು ಕೇಳಿದಳು ರಂಗಿ.

ಹೂಂ ಬರುತ್ತಾಳೆ, ಇಷ್ಟೊತ್ತಿಗೇಂತ ಏನೂ ಹೇಳಿಲ್ಲ. ಅವರುಗಳ ಕೆಲಸ ನೀನು ನೋಡಿದ್ದೀಯಲ್ಲಾ, ಹೊತ್ತಿಲ್ಲ ಗೊತ್ತಿಲ್ಲ. ಬೆಂಗಳೂರಿನಿಂದ ಲಗುಬಗಿ ನೋಡಿಕೊಂಡು ಬರ್ತೀನಿ ಎಂದಿದ್ದಳು. ತೊಗೋ ಎಂದು ತಿಂಡಿ ತುಂಬಿದ ಡಬ್ಬಿಯನ್ನು ರಂಗಿಯ ಕೈಗೆ ಕೊಟ್ಟಳು ಅರುಣಾ.

ಸರಿ ಅವ್ವಾ ನಾ ಬತ್ತೀನಿ. ಹಿಂದುಗಡೆ ಬಾಗಿಲು ಕೊಂಡಿ ಹಾಕಿದ್ದೀನಿ. ಹಿಂಗೇ ಹೋಗ್ತೀನಿ. ಮುಂಬಾಗಿಲು ಹಾಕ್ಕೊಳಿ ಎಂದು ಹೇಳಿ ಹೊರಟಳು ರಂಗಿ.

ಅವಳನ್ನು ಕಳುಹಿಸಿ ತಟ್ಟೆಗೆ ತನಗೂ ಉಪ್ಪಿಟ್ಟು ಹಾಕಿಕೊಂಡು ಕೈಯಲ್ಲಿಡಿದು ಹೊರಬಂದು ಅರುಣಾ ಹಾಲಿನಲ್ಲಿದ್ದ ಸೋಫಾದ ಮೇಲೆ ಕುಳಿತಳು. ತಿಂಡಿ ತಿಂದು ಮುಗಿಸಿ ಕಾಫಿ ಬೆರೆಸಿಕೊಂಡು ಬಂದು ಹಾಗೇ ಗುಟುಕರಿಸುತ್ತಾ ಅಂದಿನ ಪತ್ರಿಕೆಯನ್ನು ಕೈಗೆತ್ತಿಕೊಂಡಳು.

ಛೇ.. ಬರೀ ಅಡ್ವರ್ಟೈಸ್‌ಮೆಂಟೇ ಪೇಪರ್ ತುಂಬ. ಗುಂಡಿಗಳ ಮಧ್ಯದಲ್ಲಿ ರಸ್ತೆ ಇದ್ದಹಾಗೆ ಈ ಅಡ್ವರ್ಟೈಸ್‌ಮೆಂಟುಗಳ ಮಧ್ಯೆ ಸುದ್ದಿ ಸಮಾಚಾರಗಳನ್ನು ಹುಡುಕಿಕೊಂಡು ಓದಬೇಕಾಗಿದೆ ಅಂದುಕೊಂಡು ಅಸಹನೆಯಿಂದ ಕಣ್ಣಾಡಿಸಿದಳು.

ಜಾತ್ಯಾತೀತ ಪಂಥದ ಅನುಯಾಯಿ ಎಂಬೆಲ್ಲ ಅಭಿದಾನಗಳಿಗೆ ಅನ್ವರ್ಥರಾಗಿದ್ದ, ಸಮಾಜಮುಖೀ ಕೆಲಸಗಳ ಧುರೀಣ, ಅಸಹಾಯಕರ ಕಣ್ಣೀರನ್ನು ಒರೆಸುತ್ತಿದ್ದ ದಯಾಮಯಿ, ದಿವಂಗತ ಕಮಲಾಕರ್ ಅವರ ವಾರ್ಷಿಕ ಸಂಸ್ಮರಣಾ ದಿನಾಚರಣೆ ಅಸಂಖ್ಯಾತ ಅಭಿಮಾನಿಗಳಿಂದ, ಧಾರವಾಡದ ಪುರಭವನದಲ್ಲಿ.. ಭಾವಚಿತ್ರ ನೋಡಿದ ಕೂಡಲೇ ಅರುಣಾಳಿಗೆ ನಖಶಿಖಾಂತ ಕೋಪ ಉಕ್ಕಿಬಂದು ಏನು ಮಾಡುತ್ತಿದ್ದೇನೆಂಬ ಪರಿವೇ ಇಲ್ಲದೆ ಪತ್ರಿಕೆಯನ್ನು ಚೂರುಚೂರಾಗಿ ಹರಿದು ಹಾಕಿದಳು.

ಹೂಂ.. ಇವನು ಸತ್ತರೂ ನನ್ನನ್ನು ನೆರಳಿನಂತೆ ಇನ್ನೂ ಕಾಡುತ್ತಿದ್ದಾನೆ. ಥೂ..ಇವನ. ಬಿರುದು ಬಾವಲಿಗಳ ಸರದಾರ. ಇವನ ಅಸಲಿ ಮುಖವನ್ನು ಎಲ್ಲಿಯೂ ಯಾರಿಗೂ ತೋರಿಸದಂತೆ ಮುಚ್ಚಿಟ್ಟಿದ್ದನಲ್ಲ. ಅದನ್ನು ಈಗಲಾದರೂ ಎಲ್ಲರಿಗೂ ಗೊತ್ತು ಮಾಡಿಸಲೇ? ಹೂಂ. ಹೇಳಿದರೂ ನನ್ನ ಮಾತಿಗೆ ಯಾರು ಬೆಲೆ ಕೊಡುತ್ತಾರೆ. ನನ್ನ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ನನ್ನ ಬಳಿ ಸಾಕ್ಷಿ ಏನಿದೆ? ಏನು ಕುರುಹು ಬಿಟ್ಟು ಹೋಗಿದ್ದಾನೆ? ಅವನು ಅವನ್ನೆಲ್ಲ ಮಾಡುತ್ತಿರುವಾಗಲೇ ತೋರಿಸಲಾಗಲಿಲ್ಲ. ನನ್ನ ಬಾಯಿಗೆ ಬೀಗಹಾಕಿ ಬಿಟ್ಟಿದ್ದ. ಆಗ ನಾನೇಕೆ ಸುಡುವ ಕೆಂಡವನ್ನು ಮಡಿಲಿನಲ್ಲಿ ಇಟ್ಟುಕೊಂಡು ಬದುಕು ಸವೆಸಿದೆ. ಅವನನ್ನು ತೊರೆಯಬಹುದಿತ್ತಲ್ಲವಾ?

ಈಗಂತೂ ಅದೇನು ಹೊಸ ವಿಷಯವಲ್ಲ. ಸಮಾಜ ಬಹಳ ಬದಲಾವಣೆಯಾಗಿದೆ. ಹೌದು ಆದರೆ ನನ್ನ ಮನಸ್ಥಿತಿಗತಿ ಗತಕಾಲದಲ್ಲೇ ನಿಂತುಬಿಟ್ಟಿತಾ ಅಥವಾ.. .. .. ಅವಳಿಗರಿವಿಲ್ಲದೆ ಮನದಲ್ಲಿ ಅಡಗಿಕೊಂಡಿದ್ದ ಬಾಳಿನ ಪುಟಗಳು ತೆರೆದುಕೊಳ್ಳತೊಡಗಿದವು.

ಕೊಡಗಿನ ಸಮೀಪದ ಸಣ್ಣಹಳ್ಳಿಯಲ್ಲಿ ಸ್ವಲ್ಪ ಶ್ರೀಮಂತರೆನ್ನಿಸಿಕೊಂಡಿದ್ದ ಕುಟುಂಬ ಕಾಫಿ ಪ್ಲಾಂಟರ್ ಚೆನ್ನಪ್ಪ, ಕಾವೇರಮ್ಮನವರದ್ದು. ಅವರಿಗಿದ್ದ ಒಬ್ಬನೇ ಮಗ ಕಾಳಪ್ಪ. ಆತನ ಧರ್ಮಪತ್ನಿ ಮಲ್ಲಿಗೆ. ಅವರಿಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು. ಒಟ್ಟು ಮೂರು ಮಂದಿಯಲ್ಲಿ ದೊಡ್ಡವರಿಬ್ಬರು ಆದಿತ್ಯ, ಅಭಿಷೇಕ್ ಗಂಡು ಮಕ್ಕಳು. ಕೊನೆಯವಳು ಮಗಳು ಅರುಣಾ. ಮೂಲತಃ ಇವರು ಕೊಡಗಿನವರಲ್ಲ. ಯಾವುದೋ ತಲೆಮಾರಿನಲ್ಲಿ ಇಲ್ಲಿಗೆ ಬಂದು ಭೂಮಿ ಖರೀದಿಸಿ ಅದನ್ನು ಅಭಿವೃದ್ಧಿಪಡಿಸಿಕೊಂಡು ಬದುಕು ಕಟ್ಟಿಕೊಂಡು ಬಾಳಿದ್ದರು. ಅಂತಹ ಕುಟುಂಬದ ಮುಂದುವರಿದ ಮನೆತನವೇ ಅರುಣಾಳ ಹೆತ್ತವರದ್ದು. ಆಗ ಖರೀದಿಸಿದ ನೆಲ ಕಾಲಕಾಲಕ್ಕೆ ಸಾಗುವಳಿಯಲ್ಲಿ ಬದಲಾಗುತ್ತಾ ಈಗ ಕಾಫಿತೋಟವಾಗಿ ಮಾರ್ಪಟ್ಟಿತ್ತು. ಅಕ್ಕಪಕ್ಕದವರಿಗೆಲ್ಲ ಮಾದರಿ ಕುಟುಂಬವಾಗಿತ್ತು.

ಶ್ರೀಮಂತರ ಮನೆ, ಉಣ್ಣಲು ತೊಡಲು ಕೊರತೆಯಿರಲಿಲ್ಲ. ಕೆಲಸಕ್ಕೆ ಆಳುಕಾಳುಗಳಿದ್ದರು. ಅಕ್ಕರೆ ತೋರುವ ಅಜ್ಜ, ಅಜ್ಜಿ ಜೊತೆಗಿದ್ದರು. ಬೇಡಿದ್ದನ್ನು ಪೂರೈಸುವ ತಂದೆತಾಯಿಗಳು. ಪ್ರೀತಿಯ ಮಹಾಪೂರವನ್ನೇ ಹರಿಸುತ್ತಿದ್ದ ಸೋದರರು ಅರುಣಾಳಿಗೆ. ಇಂತಹ ವಾತಾವರಣದಲ್ಲಿ ಬೆಳೆದ ಅರುಣಾ ಎಸ್.ಎಸ್.ಎಲ್.ಸಿ. ಪಾಸಾದ ತಕ್ಷಣ ಕಾಲೇಜು ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮುಂದುವರೆಸಲು ಇಚ್ಛಿಸಿದಳು. ಇದು ಮನೆಯವರಿಗೆ ಅಂತಹ ಪಥ್ಯವಾಗದ ವಿಚಾರ. ಅದರೂ ಮುದ್ದಿನ ಮಗಳನ್ನು ನೋಯಿಸಲಾರದೆ ಮೈಸೂರಿನಲ್ಲಿ ಒಂದು ಪುಟ್ಟ ಮನೆಯನ್ನು ಮಾಡಿ ಅವಳ ಯೋಗಕ್ಷೇಮ ನೋಡಿಕೊಳ್ಳಲು ಮತ್ತು ಯಾವ ತಾಪತ್ರಯವೂ ಇಲ್ಲದೆ ಅಭ್ಯಾಸ ಮಾಡಲು ಅನುಕೂಲವಾಗುವಂತೆ ತಮ್ಮಲ್ಲೇ ಕೆಲಸ ಮಾಡಿಕೊಂಡಿದ್ದ ಬೋರಪ್ಪ, ಭಾಗ್ಯ ದಂಪತಿಗಳನ್ನು ಅವಳ ಜೊತೆಮಾಡಿ ಇರುವಂತೆ ವ್ಯವಸ್ಥೆ ಮಾಡಿದರು. ಆಗಿಂದಾಗ್ಗೆ ತಾವುಗಳೂ ಬಂದು ಹೋಗುತ್ತಿದ್ದರು.

ಹೆಚ್ಚಿನ ಗೌಜುಗದ್ದಲ ಮಾಡಿಕೊಳ್ಳದೆ ವಿಜ್ಞಾನ ವಿಷಯದಲ್ಲಿ ಪದವಿ ಪರೀಕ್ಷೆಯನ್ನು ಹೆಚ್ಚಿನ ಅಂಕಗಳೊಂದಿಗೆ ಯಶಸ್ವಿಯಾಗಿ ಪೂರೈಸಿದಳು. ಮನೆಯಲ್ಲಿ ಅವಳಿಗೆ ವಿವಾಹ ಮಾಡಲು ಹೆತ್ತವರು ಸಿದ್ಧವಾದರು. ಅವರನ್ನು ಉಪಾಯವಾಗಿ ಒಪ್ಪಿಸಿ ಸ್ನಾತಕೋತ್ತರ ಪದವಿಯನ್ನೂ ಪಡೆದುಕೊಂಡಳು. ಅವಳ ಅದೃಷ್ಟಕ್ಕೆ ಮೊದಲ ಪ್ರಯತ್ನದಲ್ಲಿಯೇ ಧಾರವಾಡದಲ್ಲಿ ಕಾಲೇಜಿನ ಉಪನ್ಯಾಸಕಿಯಾಗಿ ನೌಕರಿಯೂ ಸಿಕ್ಕಿಬಿಟ್ಟಿತು. ಅಗ ಮನೆಯಲ್ಲಿ ಪ್ರಸಂಗವೊಂದು ನಡೆಯಿತು.

ಅವಳ ತಾಯಿ ನೋಡಿ ಅತ್ತೆ ಮಾವ, ನೀವು ನಮ್ಮಿಬ್ಬರಿಗಿಂತ ಹೆಚ್ಚು ಅವಳನ್ನು ಮುದ್ದುಮಾಡಿ ನಮ್ಮ ಮಾತು ಕೇಳದಂತೆ ಮಾಡಿಬಿಟ್ಟಿದ್ದೀರಿ. ಈಗ ನೋಡಿ ಪರ ಊರಿನಲ್ಲಿ ಕೆಲಸಕ್ಕೆ ಹೋಗುತ್ತೇನೆಂದು ಹೊರಟು ನಿಂತಿದ್ದಾಳೆ. ಹೋಗಲಿ. ಓದಲಿ ಎಂದು ಬಿಟ್ಟದ್ದೇ ತಪ್ಪಾಯಿತು. ಬೇರೆಲ್ಲೋ ಹೋಗಿ ಕೆಲಸ ಮಾಡಿ ಸಂಪಾದಿಸುವ ಕಷ್ಟ ಇವಳಿಗೇಕೆ? ನಮ್ಮ ಅಂತಸ್ಥಿಗೆ ತಕ್ಕಂತೆ ಒಬ್ಬ ಹುಡುಗನನ್ನು ಹುಡುಕಿ ಮದುವೆ ಮಾಡುತ್ತೇವೆ. ಮದುವೆ ಮಾಡಿಕೊಂಡೇ ಹೋಗಲಿ, ಕಟ್ಟಿಕೊಂಡವನು ಒಪ್ಪಿದರೆ ಕೆಲಸವನ್ನು ಮಾಡಲಿ. ನಮಗೇನು ಅಭ್ಯಂತರವಿಲ್ಲ, ಅದು ಬಿಟ್ಟು ಕಾಣದ ಊರಿಗೆ ಒಂಟಿಯಾಗಿ ಹೊರಟು ಕಡಿದು ಕಟ್ಟೆ ಹಾಕುವುದು ಬೇಡ ಎಂದು ಕಟ್ಟುನಿಟ್ಟಾಗಿ ಹೇಳಿದ್ದರು.

ಸೊಸೆಯನ್ನು ನೋಡಿದ ಇವಳ ಅಜ್ಜಿ ಕಾವೇರಮ್ಮನವರು, ಅಜ್ಜ ಕಾಳಪ್ಪ ಸ್ವಲ್ಪ ಹೊತ್ತು ಸುಮ್ಮನಿದ್ದುಬಿಟ್ಟರು. ನಂತರ ಅಲ್ಲಮ್ಮಾ ನಾವು ಓದುವ ಹುಮ್ಮಸ್ಸಿನ ಹುಡುಗಿ ಓದಲಿ, ಮುಂದೆ ಮದುವೆ ಮಕ್ಕಳು, ಸಂಸಾರ ಇದ್ದದ್ದೇ ಎಂದು ಹೇಳಿದ್ದೆವು. ಅದರಂತೆ ಆಕೆಯೂ ಚೆನ್ನಾಗಿ ಓದು ಮುಗಿಸಿದ್ದಾಳೆ ತಾನು ಓದಿದ್ದನ್ನು ಸಾರ್ಥಕಪಡಿಸಿಕೊಳ್ಳಲು ಹೊರಟಿದ್ದಾಳೆ. ಸ್ವಸಾಮರ್ಥ್ಯದಿಂದ ಕೆಲಸ ಗಿಟ್ಟಿಸಿಕೊಂಡಿದ್ದಾಳೆ. ಎಲ್ಲರಿಗೂ ಇದು ಸಾಧ್ಯವೇ? ಅದೂ ಸರ್ಕಾರಿ ಕೆಲಸ. ಮುಂದೆ ಅವಳಿಗೆ ಎಂಥಹ ಮನೆ ಸಿಗುತ್ತೋ ಏನೋ, ಆರ್ಥಿಕವಾಗಿ ಭದ್ರತೆ ಇದ್ದರೆ ಹೇಗೂ ಬದುಕು ಕಟ್ಟಿಕೊಳ್ಳಬಹುದು ಎಂದು ಅರುಣಾಳ ಪರವಾಗಿ ಮಾತನಾಡಿ ಅಜ್ಜಿ ತಾತ ನನ್ನಮ್ಮನ ಬಾಯಿ ಮುಚ್ಚಿಸಿದರು. ಇದರಿಂದ ಅಪ್ಪ, ಮತ್ತು ಅಣ್ಣಂದಿರೂ ಅಸಮಾಧಾನ ಪಟ್ಟಿದ್ದಂತೂ ಸತ್ಯ.

ಅವತ್ತು ಹಿರಿಯರು ಪ್ರತಿರೋಧ ತೋರಿದ್ದರೆ ಹೆತ್ತವರ ಅಭಿಲಾಷೆಯಂತೆ ಮದುವೆಯಾಗಿ ಬದುಕು ಹೂಡಿದ್ದರೆ.. ಎಲ್ಲವೂ ರೆ ..ರಾಜ್ಯವೇ. ನನ್ನ ಕರ್ಮ ಇಲ್ಲಿಗೆ ಎಳೆದುಕೊಂಡು ಬಂದಿತು. ನಿಟ್ಟುಸಿರು ಬಿಟ್ಟಳು. ಕೆಲಸಕ್ಕೆ ಸೇರಿಕೊಂಡ ದಿನವನ್ನು ನೆನಪು ಮಾಡಿಕೊಂಡಳು. ಕಾಲೇಜಿನಲ್ಲಿ ಸಹೋದ್ಯೋಗಿಗಳನ್ನು ಪರಿಚಯ ಮಾಡಿಕೊಡುವಾಗ ಮೇಡಂ ನೋಡಿ ಇವರು ಕಮಲಾಕರ ಅಂತ ಕನ್ನಡ ಉಪನ್ಯಾಸಕರು. ಬಹಳ ವಿಶೇಷವ್ಯಕ್ತಿ. ಪಾಠ ಮಾಡುವುದರ ಜೊತೆಗೆ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುತ್ತಾರೆ. ಈ ಕಾಲೇಜಿಗೆ ಕೀರ್ತಿಕಳಶ ಇದ್ದಹಾಗೆ ಎಂದಿದ್ದರು. ಅರುಣಾ ತಲೆಯೆತ್ತಿ ನೋಡಿದಳು. ಅಬ್ಬಾ! ಎಂತಹ ಅಂಗಸೌಷ್ಠವ, ಆರು ಅಡಿ ಎತ್ತರದ ನಿಲುವು, ಕಣ್ಣು ಕುಕ್ಕಿಸುವಂತಹ ರೂಪಿನ ತರುಣ. ಜೊತೆಗಾರನಾದರೆ ಹೀಗಿರಬೇಕು ಎಂದುಕೊಂಡಳು.

ಅದೇ ಪರಿಸ್ಥಿತಿ ಕಮಲಾಕರನಿಗೂ ಎದುರಾಯಿತು. ಹೌದು ನೆನ್ನೆಯ ಲಂಚ್ ಟೈಮಿನಲ್ಲಿ ಹರೀಶ್‌ರ್ಸ ಅವರು ನಾಳೆ ಕೊಡಗಿನ ಬೆಡಗಿಯೊಬ್ಬಳು ನಮ್ಮ ಕಾಲೇಜಿಗೆ ವಿಜ್ಞಾನ ವಿಭಾಗಕ್ಕೆ ಉಪನ್ಯಾಸಕರಾಗಿ ಬರುತ್ತಿದ್ದಾರೆ. ಎಂದಿದ್ದರು. ಕೊಡಗಿನವರಾದ ಅವರಿಗೆ ತಮ್ಮೂರಿನವರೆಂದರೆ ಏನೋ ಅಭಿಮಾನ. ಅದು ನೆನಪಿಗೆ ಬಂತು. ಹೌದು ಮಧ್ಯಮ ಎತ್ತರದ ಸಪೂರ ಮೈಕಟ್ಟಿನ ಕೇದಗೆಯ ಬಣ್ಣದ ಲಕ್ಷಣವಾಗಿದ್ದ, ನೀಳಕೇಶದ, ಗುಳಿಕೆನ್ನೆಯ ಚೆಲುವೆಯನ್ನು ನೋಡಿದಾಗ ನೀವು ಹೇಳಿದ್ದು ನೂರಕ್ಕೆ ನೂರು ಸತ್ಯ ಸರ್ ಕೊಡಗಿನ ಬೆಡಗೀನೆ ಎಂದು ಕಣ್ಣು ಕೀಳದಂತೆ ನೋಡಿದ್ದ. ಹೀಗೇ ಒಂದೈದು ನಿಮಿಷವಾಗಿರಬಹುದು. ನಗುವಿನ ಸದ್ದು ಇಬ್ಬರನ್ನೂ ಎಚ್ಚರಿಸಿತು. ಪರಿಸ್ಥಿತಿ ಅರಿತ ಇಬ್ಬರೂ ಪರಸ್ಪರ ನಮಸ್ಕಾರಗಳನ್ನು ವಿನಿಮಯ ಮಾಡಿಕೊಂಡರು. ಅಷ್ಟರಲ್ಲಿ ಬೆಲ್ಲಿನ ಸದ್ದು ಕೇಳಿಸಿ ತಮ್ಮತಮ್ಮ ತರಗತಿಗಳ ಕಡೆಗೆ ನಡೆದರು. ದಿನಕಳೆದಂತೆ ಒಂದಲ್ಲ ಒಂದು ಸಾರಿ ಯಾವುದಾದರೂ ಸಮಯದಲ್ಲಿ ಪರಸ್ಪರ ಭೇಟಿಯಾಗುತ್ತಿತ್ತು. ಆಗ ಹಲೋ.. ಹಲೋ..ಬೈ.. ಎಂಬ ಮಾತುಗಳಲ್ಲಿ ಮುಕ್ತಾಯವಾಗುತ್ತಿತ್ತು.

ಕಾಲಕ್ರಮೇಣ ಅರುಣಾಳಿಗೆ ಕಮಲಾಕರನ ಚಟುವಟಿಕೆಗಳ ಪರಿಚಯವಾಗತೊಡಗಿತು. ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, ವಿದ್ಯಾಭ್ಯಾಸ ಮಾಡುತ್ತಿರುವ ಬಡವಿದ್ಯಾರ್ಥಿಗಳಿಗೆ ಧನಸಹಾಯ ಮಾಡುವುದು, ಕಾಲೇಜಿಗೆ ಬರುವ ಮೊದಲು ಕೆಲವು ಹಿರಿಯ ಕುಟುಂಬಗಳಿಗೆ ಭೇಟಿಕೊಟ್ಟು ಅವರುಗಳ ಬೇಕುಬೇಡಗಳನ್ನು ಕೇಳಿ ಪೂರೈಸುವುದು, ಆಗಾಗ್ಗೆ ಸ್ವಚ್ಛತಾ ಆಂದೋಲನ ಕೈಗೊಳ್ಳುವುದು, ನೇತ್ರದಾನ ಮತ್ತು ರಕ್ತದಾನ ಶಿಬಿರಗಳನ್ನು ಏರ್ಪಡಿಸಿ ದುರ್ಬಲರಿಗೆ ಇವುಗಳ ನೆರವು ತಲುಪುವಂತೆ ಮಾಡುವುದು, ಶಿಸ್ತು, ಸಂಯಮ, ಎಲ್ಲೆ ಮೀರದಂತೆ ನಡವಳಿಕೆ, ಎಲ್ಲವನ್ನು ನೋಡುತ್ತಾ ನೋಡುತ್ತಾ ಅದರಿಂದ ಪ್ರೇರಿತಳಾಗಿ ಬಿಡುವು ದೊರೆತಾಗಲೆಲ್ಲ ತಾನೂ ಅವುಗಳಲ್ಲಿ ಭಾಗಿಯಾಗುತ್ತಾ ತನಗರಿವಿಲ್ಲದಂತೆಯೇ ಕಮಲಾಕರನನ್ನು ಮನದ ಮೂಲೆಯಲ್ಲಿ ಆರಾಧಿಸತೊಡಗಿದಳು. ಅದನ್ನು ಹೇಳಲು ಏಕೋ ಹಿಂಜರಿಕೆ. ಹೀಗೇ ದಿನಗಳು ಉರುಳತೊಡಗಿದವು.


ಇತ್ತ ಅವಳ ಮನೆಯಲ್ಲಿ ವರಾನ್ವೇಷಣೆಯ ಕಾರ್ಯ ನಡೆಯುತ್ತಿತ್ತು. ಊರಿಗೆ ಅವಳು ಹೋದಾಗಲೆಲ್ಲ ಹಿರಿಯರ ಒತ್ತಾಯ, ಯಾವ ಹುಡುಗನನ್ನು ತೋರಿಸಿದರೂ ನಿರಾಕರಿಸುತ್ತಿದ್ದಳು ಅರುಣಾ. ಅವಳ ಈ ವರ್ತನೆ ಅವರಿಗೆ ಬಿಡಿಸಲಾಗದ ಕಗ್ಗಂಟಾಗಿ ಕಾಣತೊಡಗಿತು.

ತಮ್ಮ ಮಗಳು ಯಾರನ್ನಾದರೂ ಇಷ್ಟಪಟ್ಟಿದ್ದಾಳೆಯೇ ಎಂಬ ಸಂದೇಹ, ಕೇಳಲು ಸ್ವಾಭಿಮಾನ. ಮಗಳ ಮೊಂಡುತನದ ಧೋರಣೆಗಳಿಂದ ಬೇಸತ್ತ ಹೆತ್ತವರು ಗಂಡುಮಕ್ಕಳ ವಿವಾಹಗಳನ್ನು ಮಾಡಿ ಮುಗಿಸಿದರು. ಮನೆಗೆ ಅತ್ತಿಗೆಯರು ಆಗಮಿಸಿದರೂ ಅರುಣಾ ಮದುವೆಯ ಕಡೆ ಒಲವು ತೋರಿಸಲಿಲ್ಲ. ಅದಕ್ಕಿಂತ ಯಾವುದೇ ಆಕಾಂಕ್ಷಿಯನ್ನು ನೋಡಲಿ ಅವನ ಸ್ಥಳದಲ್ಲಿ ಕಮಲಾಕರನನ್ನು ಇಟ್ಟು ಹೋಲಿಕೆ ಮಾಡತೊಡಗಿದಳು.

ಕಮಲಾಕರನ ಬಗ್ಗೆ ವಿಚಾರಿಸತೊಡಗಿದಾಗ ತಿಳಿದು ಬಂದದ್ದಿಷ್ಟು. ಆತನು ಯಾರು? ಎಲ್ಲಿಂದ ಬಂದ? ಅವನ ಹೆತ್ತವರು ಯಾರು? ಯಾವ ಮತಸ್ಥ? ಯಾರಿಗೂ ಗೊತ್ತಿಲ್ಲ. ಕೆಲವರು ಆತ ಅನಾಥಾಶ್ರಮದಲ್ಲಿಂದ ಬಂದವ ಎಂದರೆ ಮತ್ತೆ ಕೆಲವರು ಯಾರೋ ತಿರುಪೆಯವನಿಗೆ ಸಿಕ್ಕಿ ಸಾಕಿದ್ದಂತೆ, ಈಗ ಅವನನ್ನು ಸಾಕಿದವನಿಲ್ಲವಂತೆ, ಹೀಗೆ ಹಿಂದೆಮುಂದೆ ಇಲ್ಲದ. ಯಾವ ಆಸ್ತಿ, ಅಂತಸ್ತಿಲ್ಲದವನಿಗೆ ಯಾರು ಹೆಣ್ಣು ಕೊಟ್ಟಾರು? ಅದಕ್ಕೇ ಹೀಗೆ ಎಂಬ ಮಾತುಗಳು ಹರಿದಾಡುತ್ತಿದ್ದವು. ಇದನ್ನೆಲ್ಲ ಕೇಳಿದರೆ ಅರುಣಾಳ ಮನೆಯವರು ಅವನೊಡನೆ ಮದುವೆ ಮಾಡಿಕೊಡುವುದು ಅಸಂಭವ. ಅಲ್ಲದೆ ಕಮಲಾಕರ ತನ್ನನ್ನು ಯಾವತ್ತೂ ಅಂತಹ ದೃಷ್ಟಿಯಲ್ಲಿ ನೋಡಿದ್ದು ಗಮನಕ್ಕೆ ಬಂದಿಲ್ಲ. ಪ್ರೀತಿ ಏಕಮುಖವಾಗಿದ್ದು ಬೇರೆ ಗಂಡುಗಳನ್ನು ಒಪ್ಪಲು ಮನಸ್ಸಾಗುತ್ತಿಲ್ಲ. ಆತನ ಮನಸ್ಸಿನಲ್ಲಿ ಏನಿದೆಯೋ ತಿಳಿಯದು. ಇದೇ ತೊಳಲಾಟದಲ್ಲಿ ಮತ್ತಷ್ಟು ಸಮಯ ಕಳೆಯಿತು.

ತಮ್ಮೂರಿನಿಂದ ಬರುತ್ತಿದ್ದ ಒತ್ತಡಗಳಿಂದ ಬೇಸತ್ತು ಹೋದ ಅರಣಾ ಧೈರ್ಯಮಾಡಿ ಕಮಲಾಕರನನ್ನು ಕೇಳಿಯೇ ಬಿಟ್ಟಳು. ಕಮಲಾಕರ್ ನನಗೆ ಸುತ್ತಿಬಳಸಿ ಮಾತನಾಡಲು ಬರುವುದಿಲ್ಲ. ನಿಮ್ಮನ್ನು ನೋಡಿದ ದಿನದಿಂದಲೂ ನಾನು ನಿಮಗೆ ಮನಸೋತಿದ್ದೇನೆ. ಮಿಗಿಲಾಗಿ ನಿಮ್ಮ ನಿಸ್ವಾರ್ಥ ಸೇವಾ ಮನೋಭಾವ ನನ್ನನ್ನು ಸೂಜಿಗಲ್ಲಿನಂತೆ ಸೆಳೆದಿದೆ. ಮದುವೆ ಅಂತ ಆದರೆ ನಿಮ್ಮನ್ನೇ ಎಂದು ನಿರ್ಧರಿಸಿಬಿಟ್ಟಿದ್ದೇನೆ. ಈ ಬಗ್ಗೆ ನಿಮ್ಮ ಬಿಚ್ಚುಮನಸ್ಸಿನ ಅಭಿಪ್ರಾಯ ತಿಳಿಯಲು ಕಾತುರಳಾಗಿದ್ದೇನೆ. ಯಾವುದೇ ಒತ್ತಾಯವಿಲ್ಲ, ಯೋಚಿಸಿ ಹೇಳಿ ಎಂದು ಬಡಬಡನೆ ಹೇಳಿ ತನ್ನ ಮನೆಯವರಿಂದ ಮದುವೆಗೆ ಆಗುತ್ತಿರುವ ಒತ್ತಡದ ಬಗ್ಗೆ ಮರೆಯದೆ ತಿಳಿಸಿ ಅವನ ಪ್ರತಿಕ್ರಿಯೆಗಾಗಿ ಕಾದಳು.

ಅರುಣಾಳನ್ನು ಕಂಡ ಮೊದಲನೆಯ ದಿನದಿಂದಲೇ ಕರುಣಾಕರನೂ ಅವಳಿಗೆ ಮನಸೋತಿದ್ದ. ಆಕೆಯ ಸಾಂಸಾರಿಕ ಹಿನ್ನೆಲೆಯನ್ನು ತಿಳಿದು ತನ್ನ ಕೈಗೆಟುಕದ್ದೆಂದು ಸುಮ್ಮನಾಗಿದ್ದ. ಆದರೆ ಇತ್ತೀಚೆಗೆ ಅರುಣಾಳ ನಡವಳಿಕೆಗಳಿಂದ ಅವಳಿಗೂ ನನ್ನ ಬಗ್ಗೆ ಆಸಕ್ತಿಯಿದೆ, ಹೇಳಲಾರದೆ ತೊಳಲಾಡುತ್ತಿದ್ದಾಳೆ ಎಂದು ತಿಳಿದಿದ್ದ. ಆದರೂ ತನ್ನಿಚ್ಛೆಯನ್ನು ಹೊರಗೆ ತೋರ್ಪಡಿಸಿಕೊಳ್ಳದೆ ಇದ್ದವನಿಗೆ ಅರುಣಾಳಿಂದಲೇ ಆಹ್ವಾನ ಬಂದದ್ದು ಅಮೃತ ಕುಡಿದಷ್ಟು ಸಂತಸ ತಂದಿತು. ಅರುಣಾ ನಿಮ್ಮಂಥಹ ಜೊತೆಗಾತಿ ದೊರಕಬೇಕಾದರೆ ಪುಣ್ಯ ಮಾಡಿರಬೇಕು. ನಿರಾಕರಿಸುವಂತಹ ಯಾವ ಕಾರಣಗಳೂ ಇಲ್ಲ. ನೀವು ಮತ್ತೊಮ್ಮೆ ಆಲೋಚಿಸಿ ನಿರ್ಧಾರಕ್ಕೆ ಬನ್ನಿ. ಏಕೆಂದರೆ ಹಿಂದೆಮುಂದಿಲ್ಲದ ಒಂಟಿಬಡುಕ ನಾನು, ನನಗೆ ನನ್ನವರೂಂತ ಯಾರೂ ಇಲ್ಲ. ನಿಮ್ಮ ಕುಟುಂಬದವರು ಇದಕ್ಕೆ ಒಪ್ಪಿಕೊಳ್ಳಲಾರರು. ನನ್ನ ಕಡೆಯಿಂದ ಅಭ್ಯಂತರವಿಲ್ಲ ಎಂದು ಹೇಳಿದನು.





(3ನೇ ಪುಟಕ್ಕೆ)

# ಭಾವ ಲಹರಿ

## ಹುಂಡಿಯೇ ಇಲ್ಲದ ಗುಡಿ!

ಒಂದು ಕಡೆ ದೇವಾಲಯ, ಆ ದೇವಾಲಯದ ಎದುರು ನಿಂತು ನೋಡಿದರೆ ಕಣ್ಣು ಹಾಯಿಸುವಷ್ಟು ನೀರು. ಅದರಲ್ಲೂ ಸಂಜೆ ವೇಳೆ ಇಲ್ಲಿಗೆ ಹೋದರೆ ಸೂರ್ಯ ಆಗತಾನೇ ಡ್ಯೂಟಿ ಮುಗಿಸಲು ರೆಡಿ ಆಗಿ, ಆಗಸಕ್ಕೆ ಕೆಂಪು ಬಣ್ಣ ಬಳಿದು ಅಲ್ಲಿನ ಪರಿಸರವನ್ನು ಮತ್ತಷ್ಟು ಚೆಂದಗಾಣಿಸುತ್ತಾನೆ. ಅಲ್ಲಲ್ಲಿ ತೆಪ್ಪದ ರೈಡ್ ಮಾಡುತ್ತಾ ಎಂಜಾಯ್ ಮಾಡುತ್ತಿರುವ ಜನ, ಸೂರ್ಯನೇ ಮನೆಗೆ ಹೊರಟ ಎಂದು ಗಡಿಬಿಡಿಯಲ್ಲಿ ಗೂಡಿನತ್ತ ಸಾಗುವ ಪಕ್ಷಿಗಳು.. ಹೀಗೆ ಒಂದಕ್ಕಿಂತ ಒಂದು ಅದ್ಭುತ ದೃಶ್ಯಗಳನ್ನು ನೀವು ನೋಡಬಹುದು. ಈ ದೃಶ್ಯ ಕಾಣಿಸೋದು ವೇಣುಗೋಪಾಲ ಪಾಲ ಸ್ವಾಮಿ ದೇವಾಲಯದಲ್ಲಿ.

ವೇಣುಗೋಪಾಲ ಸ್ವಾಮಿ ದೇವಾಲಯ ಇರೋದು ಮಂಡ್ಯ ಜಿಲ್ಲೆಯ ಹೊಸ ಕನ್ನಂಬಾಡಿ ಬಳಿ. ನಗರದ ಜಂಜಾಟ ಸಾಕೆನಿಸಿ ವೀಕೆಂಡ್‌ನ ಹಾಯಾಗಿ ಕಳೆದು ಬರುತ್ತೇನೆ ಎಂದರೆ ಈ ಸ್ಥಳ ನಿಮಗೆ ಒಳ್ಳೆಯ ಆಯ್ಕೆ. ಇಲ್ಲಿ ದೇವಾಲಯವನ್ನು ನೋಡುವುದರ ಜತೆಗೆ ಕಾವೇರಿ ಹಿನ್ನೀರಿನಲ್ಲಿ ಆಟ ಆಡಿ ಬರಬಹುದು.

ಈ ದೇವಾಲಯದ ಇತಿಹಾಸ: 1909ರಲ್ಲಿ ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟು ನಿರ್ಮಾಣ ಮಾಡಲಾಯಿತು. ಈ ಅಣೆಕಟ್ಟು ನಿರ್ಮಾಣಕ್ಕೂ ಮೊದಲು ಈ ದೇವಾಲಯವು ಕನ್ನಂಬಾಡಿ ಗ್ರಾಮದಲ್ಲಿಯೇ ಇತ್ತು. ಸ್ಥಳೀಯರು ಹಾಗೂ ಇತರರು ದೇವಾಲಕ್ಕೆ ಬಂದು ದರ್ಶನ ಪಡೆಯುತ್ತಿದ್ದರು.

1909ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರು ಕೆಆರ್‌ಎಸ್ ಡ್ಯಾಂ ನಿರ್ಮಾಣ ಮಾಡಿದರು. ಈ ವೇಳೆ ಈ ದೇವಾಲಯ ನೀರಿನಲ್ಲಿ ಮುಳುಗಿ ಹೋಯಿತು. ಆ ಬಳಿಕ ಕಡು ಬೇಸಿಗೆ ಸಂದರ್ಭದಲ್ಲಿ ಮಾತ್ರ ದೇವಾಲಯವು ಕಾಣುತ್ತಿತ್ತು. ಹಲವು ದಶಕಗಳ ಕಾಲ ದೇಗುಲನೀರಿನಲ್ಲೇ ಇತ್ತು.

ದೇವಾಲಯದ ಮರು ನಿರ್ಮಾಣ: ಈ ದೇವಾಲಯವನ್ನು ಮತ್ತೆ ನಿರ್ಮಾಣ ಮಾಡಬೇಕು ಎಂದುಕೊಂಡವರು ಉದ್ಯಮಿ ಹರಿ ಖೋಡೆ. ಖೋಡೆ ಪ್ರತಿಷ್ಠಾನ ಅಡಿಯಲ್ಲಿ ದೇವಾಲಯವನ್ನು ಸ್ಥಳಾಂತರ ಮಾಡಲಾಯಿತು. ಈಗ ಸುಮಾರು ಎರಡೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ದೇವಾಲಯ ನಿರ್ಮಾಣ ಆಗಿದೆ. ಮೂಲ ದೇವಾಲಯದಿಂದ ಒಂದು ಕಿಮೀ ದೂರದಲ್ಲಿ ಈ ದೇವಾಲಯ ಸ್ಥಾಪನೆ ಮಾಡಲಾಗಿದೆ.

**ಕಾಣಿಕೆ ಹಾಕುವಂತಿಲ್ಲ:** ಸಾಮಾನ್ಯವಾಗಿ ದೇವಸ್ಥಾನಕ್ಕೆ ತೆರಳಿದರೆ ಅಲ್ಲಿ ಒಂದು ಕಾಣಿಕೆ ಹುಂಡಿ ಇದ್ದೇ ಇರುತ್ತದೆ. ಆದರೆ, ಈ ದೇವಾಲಯದಲ್ಲಿ ಕಾಣಿಕೆಯನ್ನು ಹಾಕುವಂತಿಲ್ಲ. ಈ ಕಾರಣಕ್ಕೆ ಇಲ್ಲಿ ಯಾವುದೇ ಹುಂಡಿಯನ್ನು ಇಡಲಾಗಿಲ್ಲ. ಇಷ್ಟೇ ಅಲ್ಲ, ಅಲ್ಲಿ ಪೂಜೆ ಮಾಡುವ ಅರ್ಚಕರಿಗೂ ದಕ್ಷಿಣೆ ಕಾಣಿಕೆ ರೂಪದಲ್ಲಿ ಆರತಿ ತಟ್ಟೆಗೆ ಹಣ ಹಾಕುವಂತಿಲ್ಲ.

**ಬಸ್ ವ್ಯವಸ್ಥೆ ಇಲ್ಲ! :** ಬೆಂಗಳೂರು ನಗರ ಭಾಗದಿಂದ ಈ ಸ್ಥಳ ಸುಮಾರು 150 ಕಿ.ಮೀ ದೂರದಲ್ಲಿ ಇದೆ. ಬೆಂಗಳೂರಿನಿಂದ ಇಲ್ಲಿಗೆ ಬಸ್ ವ್ಯವಸ್ಥೆ ಇಲ್ಲ. ಹೀಗಾಗಿ, ಸ್ವಂತ ವಾಹನದಲ್ಲಿ ಇಲ್ಲಿಗೆ ಪ್ರಯಾಣಿಸೋದು ಉತ್ತಮ. ಹಂಪಿಯ ಮಾದರಿಯ ಕಲ್ಲಿನ ರಥವನ್ನು ಇಲ್ಲೂ ಇಡಲಾಗಿದ್ದು, ಇದು ಆಕರ್ಷಣೆಯ ಕೇಂದ್ರ ಬಿಂದು.

**ಇರಲಿ ಎಚ್ಚರ:** ವೇಣುಗೋಪಾಲಸ್ವಾಮಿ ದೇವಾಲಯ ಮಾತ್ರವಲ್ಲದೆ. ಇಲ್ಲಿ ರಾವರಿ ಹಿನ್ನೀರು ಕೂಡ ಇದೆ. ಸಿರಿಗಾಗಿ ನೀರಿನಲ್ಲಿ ಆಟ ಹೆಚ್ಚಿರುವುದರಿಂದ ಆ ಸಂದರ್ಭದಲ್ಲಿ ನೀರಿಗೆ ಇಳಿಯಲು ಆಡಬಹುದು. ಆದರೆ, ಮಳೆಗಾಲದಲ್ಲಿ ಇಲ್ಲಿ ನೀರಿನ ಮಟ್ಟ ಸಾಧ್ಯವಾಗದೆಯೂ ಇರಬಹುದು.

**- ಕಾವ್ಯಾ** ಎಚ್



## ಸತ್ಯದ ಶಕ್ತಿ ಅದರ ಪ್ರತಿಪಾದನೆಯಲ್ಲಿದೆ

**■ ಸತ್ಯವು ಎಂದಿಗೂ ಶಾಶ್ವತ ಎಂದು ನಾವು ಬಾಲ್ಯದಿಂದಲೇ ಕಲಿತಿದ್ದೇವೆ. ಸತ್ಯಮೇವ ಜಯತೇ ಎಂಬುದು ನಮ್ಮ ರಾಷ್ಟ್ರದ ಮಂತ್ರ. ಆದರೆ ನಿಜ ಜೀವನದಲ್ಲಿ ಈ ಮಾತು ಎಷ್ಟು ಸತ್ಯವಾಗಿ ಅನ್ವಯವಾಗುತ್ತಿದೆ? ಇತಿಹಾಸ, ಸಮಾಜ, ರಾಜಕೀಯ ಅಥವಾ ವ್ಯವಹಾರ ಎಲ್ಲ ಕ್ಷೇತ್ರಗಳಲ್ಲಿಯೂ ನಾವು ಕಾಣುವ ವಾಸ್ತವ್ಯ ಏನೆಂದರೆ, ಸತ್ಯವು ತನ್ನಂತೆಯೇ ಹೊರಬಂದು ಜಯ ಸಾಧಿಸುವುದಿಲ್ಲ. ಸತ್ಯವು ಕೆಲವೊಮ್ಮೆ ಮೌನವಾಗಿಯೇ ಉಳಿದುಕೊಳ್ಳುತ್ತದೆ, ಕೆಲವೊಮ್ಮೆ ಸುಳ್ಳಿನ ಗದ್ದಲದಲ್ಲಿ ಮುಚ್ಚಿಹೋಗುತ್ತದೆ.**

ಸತ್ಯವನ್ನು ಬಲವಾಗಿ ಪ್ರತಿಪಾದಿಸಿದರೆ ಮಾತ್ರ ಅದು ಸಮಾಜವನ್ನು ಬದಲಿಸುತ್ತದೆ ಎಂಬು ದಕ್ಕೆ ನಮ್ಮ ಇತಿಹಾಸವೇ ಸಾಕ್ಷಿ. ಮಹಾತ್ಮ ಗಾಂಧೀಜಿ ಕೇವಲ ಸತ್ಯ ಎಂಬ ಮಾತನ್ನು ಉಪದೇಶಿಸಿದವರಲ್ಲ. ಸತ್ಯಾಗ್ರಹದ ಮೂಲಕ ಅವರು ಅದನ್ನು ಕ್ರಿಯಾಶೀಲ ಹೋರಾಟವನ್ನಾಗಿ ರೂಪಿಸಿದರು.

ಸತ್ಯವು ಎಂದಿಗೂ ಶಾಶ್ವತ ಎಂದು ನಾವು ಬಾಲ್ಯದಿಂದಲೇ ಕಲಿತಿದ್ದೇವೆ. ಸತ್ಯಮೇವ ಜಯತೇ ಎಂಬುದು ನಮ್ಮ ರಾಷ್ಟ್ರದ ಮಂತ್ರ. ಆದರೆ ನಿಜ ಜೀವನದಲ್ಲಿ ಈ ಮಾತು ಎಷ್ಟು ಸತ್ಯವಾಗಿ ಅನ್ವಯವಾಗುತ್ತಿದೆ? ಇತಿಹಾಸ, ಸಮಾಜ, ರಾಜಕೀಯ ಅಥವಾ ವ್ಯವಹಾರ ಎಲ್ಲ ಕ್ಷೇತ್ರಗಳಲ್ಲಿಯೂ ನಾವು ಕಾಣುವ ವಾಸ್ತವ್ಯ ಏನೆಂದರೆ, ಸತ್ಯವು ತನ್ನಂತೆಯೇ ಹೊರಬಂದು ಜಯ ಸಾಧಿಸುವುದಿಲ್ಲ. ಸತ್ಯವು ಕೆಲವೊಮ್ಮೆ ಮೌನವಾಗಿಯೇ ಉಳಿದುಕೊಳ್ಳುತ್ತದೆ, ಕೆಲವೊಮ್ಮೆ ಸುಳ್ಳಿನ ಗದ್ದಲದಲ್ಲಿ ಮುಚ್ಚಿಹೋಗುತ್ತದೆ. ಆದ್ದರಿಂದ ಸತ್ಯವನ್ನು ಕೇವಲ ಹೇಳುವುದರಿಂದ ಫಲವಿಲ್ಲ; ಅದನ್ನು ದೃಢವಾಗಿ, ಧೈರ್ಯದಿಂದ, ಪ್ರಾಮಾಣಿಕವಾಗಿ ಪ್ರತಿಪಾದಿಸಬೇಕು.

ಇತಿಹಾಸ ನಮಗೆ ಕಲಿಸುವ ಪಾಠ ಸತ್ಯವನ್ನು ಬಲವಾಗಿ ಪ್ರತಿಪಾದಿಸಿದರೆ ಮಾತ್ರ ಅದು ಸಮಾಜವನ್ನು ಬದಲಿಸುತ್ತದೆ ಎಂಬುದಕ್ಕೆ ನಮ್ಮ ಇತಿಹಾಸವೇ ಸಾಕ್ಷಿ.

– ಮಹಾತ್ಮ ಗಾಂಧೀಜಿ ಕೇವಲ ಸತ್ಯ ಎಂಬ ಮಾತನ್ನು ಉಪದೇಶಿಸಿದವರಲ್ಲ. ಅವರು ಅದನ್ನು ಕ್ರಿಯಾಶೀಲ ಹೋರಾಟವನ್ನಾಗಿ ರೂಪಿಸಿದರು. ಸತ್ಯಾಗ್ರಹ ಎಂದರೆ ಸತ್ಯದ ಪರವಾಗಿ ದೃಢ ನಿಲುವು. ಗಾಂಧೀಜಿಯವರ ಧೈರ್ಯದಿಂದ ಪ್ರತಿಪಾದಿಸಿದ ಸತ್ಯವೇ ಬ್ರಿಟಿಷ್ ಸಾಮ್ರಾಜ್ಯವನ್ನು ಉರುಳಿಸಿತು.

– ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೇವಲ ಅಸ್ಪೃಶ್ಯತೆಯ ವಿರುದ್ಧ ವಾದ ಮಾಡಿದವರಲ್ಲ. ಅವರು ಅದನ್ನು ಪ್ರಬಲವಾದ ಕಾನೂನುಬದ್ಧ ಸತ್ಯವನ್ನಾಗಿ ರೂಪಿಸಿ ಸಂವಿಧಾನದಲ್ಲಿ ಅಳವಡಿಸಿದರು. ಅವರ ದೃಢ ಪ್ರತಿಪಾದನೆಯೇ ಸಮಾಜಕ್ಕೆ ಸಮಾನತೆಯ ದಾರಿ ತೋರಿಸಿತು.

– ಸ್ವಾಮಿ ವಿವೇಕಾನಂದರು ಕೇವಲ ಆಧ್ಯಾತ್ಮಿಕ ಸತ್ಯಗಳನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡವರಲ್ಲ.

ಅವರು ಶಿಕಾಗೋ ವೇದಿಕೆಯ ಮೇಲೆ ನಿಂತು ಧೈರ್ಯದಿಂದ ವಿಶ್ವಕ್ಕೆ ಘೋಷಿಸಿದರು. ಅವರ ಪ್ರತಿಪಾದನೆಯೇ ವಿಶ್ವದ ಮನಸ್ಸನ್ನು ಕದಡಿತು. ಈ ಎಲ್ಲ ಉದಾಹರಣೆಗಳಿಂದ ಸ್ಪಷ್ಟವಾಗುವುದು ಸತ್ಯವನ್ನು ಬಲವಾಗಿ ಪ್ರತಿಪಾದಿಸಿದಾಗ ಮಾತ್ರ ಅದು ಇತಿಹಾಸ ನಿರ್ಮಿಸುತ್ತದೆ. ದುರ್ಬಲವಾಗಿ ಹೇಳಿದ ಸತ್ಯವು ಕೇವಲ ಒಂದು ಮಾತು, ಬಲವಾಗಿ ಪ್ರತಿಪಾದಿಸಿದ ಸತ್ಯವೇ ಕ್ರಾಂತಿ.

ಇಂದಿನ ಸಮಾಜದಲ್ಲಿ ಸತ್ಯದ ಸ್ಥಿತಿ ಇಂದಿನ ದಿನಗಳಲ್ಲಿ ಸತ್ಯವು ಅತೀ ದೊಡ್ಡ ಸವಾಲಿನ ಮುಂದೆ ನಿಂತಿದೆ. ಸುಳ್ಳು, ಪ್ರಚಾರ, ಭ್ರಾಂತಿ, ಅಪವಾದ ಇವುಗಳು ಪ್ರಬಲವಾಗಿ ಹರಡುತ್ತಿವೆ. ತಂತ್ರಜ್ಞಾನ ಮತ್ತು ಮಾಧ್ಯಮಗಳ ನೆರವಿನಿಂದ ಸುಳ್ಳು ಕೆಲವೇ ಗಂಟೆಗಳಲ್ಲಿ ಲಕ್ಷಾಂತರ ಜನರ ಕಿವಿಗೆ ತಲುಪುತ್ತದೆ. ಆದರೆ ಸತ್ಯವು



ನಿಧಾನವಾಗಿ, ಮೌನವಾಗಿ ಸಾಗುತ್ತದೆ.

ಜನರು ಯಾವಾಗಲೂ ಸತ್ಯವನ್ನು ಹುಡುಕುವುದಿಲ್ಲ. ಬದಲಿಗೆ, ಯಾರು ಹೆಚ್ಚು ಜೋರಾಗಿ ಹೇಳುತ್ತಾರೆ, ಯಾರು ಹೆಚ್ಚು ಆಕರ್ಷಕವಾಗಿ ಮಂಡಿಸುತ್ತಾರೆ, ಅವರ ಮಾತುಗಳೇ ಜನಮನದಲ್ಲಿ ಆಳವಾಗಿ ಬೀಳುತ್ತವೆ. ಈ ವಾಸ್ತವ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಇದರಿಂದ ನಾವು ಕಲಿಯಬೇಕಾದ ಪಾಠವೇನೆಂದರೆ: ಸತ್ಯವು ಕೇವಲ ಅಸ್ತಿತ್ವ ಹೊಂದಿದರೆ ಸಾಕಾಗುವುದಿಲ್ಲ. ಅದನ್ನು ನಾವು ಬಲವಾಗಿ ಪ್ರತಿಪಾದಿಸಬೇಕು. ಇಲ್ಲವಾದರೆ ಅದು ಅಸತ್ಯದ ಗದ್ದಲದಲ್ಲಿ ನಶಿಸುತ್ತದೆ.

ಸತ್ಯವನ್ನು ಬಲವಾಗಿ ಪ್ರತಿಪಾದಿಸುವ ಅರ್ಥವೇನು?

ಸತ್ಯವನ್ನು ಬಲವಾಗಿ ಪ್ರತಿಪಾದಿಸುವುದು ಅಂದರೆ ಕೇವಲ ಧ್ವನಿ ಎತ್ತುವುದು ಮಾತ್ರವಲ್ಲ. ಅದರ ನಿಜವಾದ ಅರ್ಥ ಬಹು ಆಳವಾದುದು:

1. ಸಾಕ್ಷಿಗಳಿಂದ ಬಲಪಡಿಸುವುದು ಸತ್ಯವನ್ನು ಹೇಳುವಾಗ ಖಚಿತ ದಾಖಲೆ, ತಥ್ಯ, ಪ್ರಮಾಣ ಇವುಗಳನ್ನು ಸಮರ್ಪಿಸುವುದು.

2. ತಾರ್ಕಿಕತೆಯಿಂದ ಪ್ರತಿಪಾದಿಸುವುದು ಕೇವಲ ಭಾವನಾತ್ಮಕವಾಗಿ ಅಲ್ಲ, ತಾರ್ಕಿಕವಾದ ದೃಷ್ಟಿಕೋನದಿಂದ ಮಂಡಿಸುವುದು.

3. ನಿರ್ಭೀತಿಯಾಗಿ ನಿಲ್ಲುವುದು ವಿರೋಧ ಬಂದರೂ, ಬೆದರಿಕೆ ಬಂದರೂ, ಅಡಗದೆ ನಿಲ್ಲುವುದು.

4. ಅನುಭವದ ಮೂಲಕ ಬದುಕಿಸುವುದು

ಸತ್ಯವನ್ನು ಕೇವಲ ಮಾತಿನಲ್ಲಿ ಅಲ್ಲ, ನಮ್ಮ ವರ್ತನೆ, ಜೀವನಶೈಲಿ, ನಡವಳಿಕೆಯಲ್ಲಿ ತೋರಿಸುವುದು.

5. ಸಮೂಹವನ್ನು ಪ್ರೇರೇಪಿಸುವುದು ಒಬ್ಬರ ಧ್ವನಿ ಮಾತ್ರವಲ್ಲ, ಸಮೂಹವನ್ನು ಎಚ್ಚರಿಸಿ ಸತ್ಯದ ಪರವಾಗಿ ಒಗ್ಗೂಡಿಸುವುದು.

ಇದೆಲ್ಲವು ಸೇರಿ ಸತ್ಯವನ್ನು ಬಲವಾಗಿ ಪ್ರತಿಪಾದಿಸಿದಾಗ ಅದು ಸಮಾಜದಲ್ಲಿ ಪ್ರಭಾವ ಬೀರುತ್ತದೆ. ದೈನಂದಿನ ಜೀವನದಲ್ಲಿ ಉದಾಹರಣೆ ಎಂದರೆ ಒಂದು ಕಚೇರಿಯಲ್ಲಿ ಅಧಿಕಾರ ದುರುಪಯೋಗ ನಡೆಯುತ್ತಿದೆ ಎಂದು ಒಬ್ಬರಿಗೆ ಗೊತ್ತಿದೆ. ಅವರು ಮೌನವಾಗಿದ್ದರೆ, ಅಥವಾ ನಿಧಾನವಾಗಿ ಯಾರಿಗಾದರೂ ಹೇಳಿದರೆ, ಆ ಸತ್ಯ ಅಡಗಿಬಿಡುತ್ತದೆ.

ಆದರೆ ಅದೇ ಸತ್ಯವನ್ನು ಅವರು ಸಾಕ್ಷಿಗಳೊಂದಿಗೆ, ಧೈರ್ಯದಿಂದ ಪ್ರತಿಪಾದಿಸಿದರೆ ವರದಿಗಳಲ್ಲಿ, ಸಭೆಗಳಲ್ಲಿ, ಕಾನೂನಿನ ಮುಂದೆ ಬದಲಾವಣೆ ಸಂಭವಿಸಬಹುದು.

ಇದನ್ನು ಕುಟುಂಬದ ಬದುಕಿಗೂ ಅನ್ವಯಿಸಬಹುದು. ತಪ್ಪನ್ನು ತಿಳಿದುಕೊಂಡು ಮೌನವಾಗುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆದರೆ ಸತ್ಯವನ್ನು ಸ್ಪಷ್ಟವಾಗಿ, ಬಲವಾಗಿ ಹೇಳಿದರೆ ಸಂಬಂಧಗಳು ಶುದ್ಧವಾಗುತ್ತವೆ.

ಸತ್ಯದ ಬೆಲೆಯನ್ನು ನಿರ್ವಿವಾದವಾಗಿ ಹೇಳಬೇಕಾದರೆ ಸತ್ಯವನ್ನು ಬಲವಾಗಿ ಪ್ರತಿಪಾದಿಸುವುದು ಸುಲಭದ ಕೆಲಸವಲ್ಲ. ಅದು ವಿರೋಧ, ವಿರಸ, ಅಪಾಯ ತರಬಹುದು. ಇತಿಹಾಸದ ಅನೇಕರು ಸತ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣವನ್ನೇ ಬಲಿ ಕಟ್ಟಿದ್ದಾರೆ. ಆದರೆ ಅವರ ತ್ಯಾಗವೇ ಇಂದಿನ ನಮ್ಮ ಸ್ವಾತಂತ್ರ್ಯ, ನಮ್ಮ ಹಕ್ಕು, ನಮ್ಮ

ಬದುಕಿನ ಆಧಾರವಾಗಿದೆ. ಅಂದರೆ, ಸತ್ಯವನ್ನು ಪ್ರತಿಪಾದಿಸುವ ಬೆಲೆ ಇದ್ದರೂ, ಅದರ ಫಲ ಶಾಶ್ವತ. ಸಮಾಜಕ್ಕೆ ಸಂದೇಶ ಇಂದಿನ ಯುವಜನತೆಗೆ, ನಾಗರಿಕರಿಗೆ, ಉದ್ಯಮಿಗಳಿಗೆ, ನಾಯಕರಿಗೆ ಈ ಸಂದೇಶ ಸ್ಪಷ್ಟ:

– ಸತ್ಯವನ್ನು ಕೇವಲ ತಿಳಿದುಕೊಳ್ಳಿ ಎಂಬುದಲ್ಲ, ಅದನ್ನು ಧೈರ್ಯದಿಂದ ಹೇಳಿ; ಇನ್ನೂ ಮುಖ್ಯವಾಗಿ, ಅದನ್ನು ಬಲವಾಗಿ ಪ್ರತಿಪಾದಿಸಿ.

ಸತ್ಯವು ಬಲವಾದಾಗ ಮಾತ್ರ ಸಮಾಜದ ಮೇಲೆ ಶಾಶ್ವತ ಪ್ರಭಾವ ಬೀರುತ್ತದೆ. ಇಲ್ಲವಾದರೆ ಅದು ಮೌನದಲ್ಲಿ ನಾಶವಾಗುತ್ತದೆ. ಸತ್ಯವನ್ನು ಹೇಳುವುದು ಪ್ರಾರಂಭ. ಅದು ನಮ್ಮ ಶೂರತನ. ಆದರೆ ಅದನ್ನು ಬಲವಾಗಿ ಪ್ರತಿಪಾದಿಸುವುದೇ ಅಂತಿಮ ಜಯ.

ದುರ್ಬಲವಾಗಿ ಹೇಳಿದ ಸತ್ಯವು ಕೇವಲ ಕಿವಿಗೆ ಬೀಳುತ್ತದೆ; ಬಲವಾಗಿ ಪ್ರತಿಪಾದಿಸಿದ ಸತ್ಯವು ಹೃದಯಕ್ಕೆ ತಾಕುತ್ತದೆ. ಜನಮನವನ್ನು ಬದಲಿಸುತ್ತದೆ, ಸಮಾಜವನ್ನು ಕ್ರಾಂತಿಯತ್ತ ಕೊಂಡೊಯ್ಯುತ್ತದೆ. ಅದಕ್ಕಾಗಿ ಪ್ರತಿಯೊಬ್ಬರಿಗೂ ಕರ್ತವ್ಯವಿದೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ, ನಮ್ಮ ಮಾತುಗಳಲ್ಲಿ, ನಮ್ಮ ನಡವಳಿಕೆಯಲ್ಲಿ, ನಮ್ಮ ಹೋರಾಟದಲ್ಲಿ ಸತ್ಯವನ್ನು ಬಲವಾಗಿ ಪ್ರತಿಪಾದಿಸುವುದು. ಏಕೆಂದರೆ, ಸತ್ಯವನ್ನು ಹೇಳುವವನು ಶೂರ, ಆದರೆ ಸತ್ಯವನ್ನು ಬಲವಾಗಿ ಪ್ರತಿಪಾದಿಸುವವನೇ ನಿಜವಾದ ವಿಜಯಶೀಲ.


**- ಸಿದ್ದೇಶ್** ಹಾರನಹಳ್ಳಿ

ಕನ್ನಡ ಕವನಗಳು ★★★

## ನೇಗಿಲು ನೆಲವ ನೋಡಿತೆ

ತೆರೆ ತೆರೆಗಳಂತೆ
ಸುಳಿ ಸುಳಿಯ ಅಲೆಗೆ
ಬದು ಬದುಕು ಬರಡು ಆಯ್ತು
ತೆನೆ ತೆನೆಗಳಾಚೆ
ಉಸಿ ಉಸಿರು ಹೋಗೆ
ಮುರು ಮುರುಟಿ ಜೀವ ಹೋಯ್ತು
ಮೋಡ ಮೋಡದೊಳಗೆ
ಸಿಡಿ ಸಿಡಿಲು ಹೊಮ್ಮಿ
ದರೆ ದರೆಗೆ ಚಿಮ್ಮಿ ಬಂತ್ತು
ಗುಡು ಗುಡುಗಿನೊಳಗೆ
ಮಳೆ ಮಳೆಯು ಬಂದು
ಬೆಳೆ ಬೆಳೆಯೆ ನಾಶವಾಯ್ತು
ಒಡ ಒಡಲ ನೋವು
ಬಿರ ಬಿರನೆ ಬರಲು
ಖುಷಿ ಖುಷಿಯು ಹೊರಟು ಹೋಯ್ತು
ಹಸಿ ಹಸಿಯ ಪೈರು
ನೆಲ ನೆಲಕೆ ಒರಗೆ
ಕಣ್ಣ್ ಕಣ್ಣು ನೆಲವ ನೋಡ್ತು
ತಲೆ ತಲೆಯ ಮೇಲೆ
ಮನೆ ಮನೆಯೆ ಬೀಳೆ
ಇರು ಇರುವುದೇಗೆ ಚಿತ್ತ
ಚಿತೆ ಚಿತೆಯವೊಳಗೆ
ಮುಳು ಮುಳುಗೆ ಇರಲು
ಒಲ ಒಲವು ಮಸಣವಾಯ್ತು

**- ಹಾ ಮ ಸತೀಶ** ಬೆಂಗಳೂರು



(2ನೇ ಪುಟದಿಂದ ಮುಂದುವರೆದಿದೆ) ಕಮಲಾಕರನ ಮಾತುಗಳನ್ನು ಕೇಳಿದ ಅರುಣಾನ ಮನ ಹರ್ಷದಿಂದ ಬೀಗಿತು. ಅಬ್ಬಾ! ನೀವೊಪ್ಪಿದಿರಲ್ಲಾ ನನಗಷ್ಟೇ ಸಾಕು. ಯಾರು ಒಪ್ಪಲಿ ಬಿಡಲಿ ಅದರ ಬಗ್ಗೆ ನನಗೆ ಚಿಂತೆಯಿಲ್ಲ. ಎಂದಳು. ತಮ್ಮ ಮನೆಯವರನ್ನು ಒಪ್ಪಿಸುವುದು ಅಸಾಧ್ಯವೆಂದರಿತ ಅರುಣಾ ಅವರಿಗೆ ವಿಷಯ ತಿಳಿಸದೆಯೇ ಕೆಲವೇ ಕೆಲವು ಸಹೋದ್ಯೋಗಿಗಳ ಸಮ್ಮುಖದಲ್ಲಿ ರಿಜಿಸ್ಟ್ರಾರ್ ಕಛೇರಿಯಲ್ಲಿ ಮದುವೆಯಾಗಿ ಸಂಸಾರ ಹೂಡಿಯೇ ಬಿಟ್ಟಳು.

ನಂತರ ವಿಷಯ ತಿಳಿದ ಅವಳ ಮನೆಯ ಹಿರಿಯರೆಲ್ಲರೂ ಕೆಂಡಾಮಂಡಲರಾಗಿ ಇನ್ನೆಂದೂ ನಮ್ಮ ಮನೆಗೆ ನೀನು ಕಾಲಿಡಬೇಡ. ನಾವೂ ನೀನಿರುವ ದಿಕ್ಕಿಗೂ ತಲೆಹಾಕುವುದಿಲ್ಲ ಎಂದು ಫೋನಿನಲ್ಲೇ ಅವಳನ್ನು ಬಹಿಷ್ಕರಿಸಿದರು. ಅವಳಿಗೆ ಮಾತಿನಲ್ಲೇ ಮಂಗಳಾರತಿ ಮಾಡಿದರು.

ಪ್ರೀತಿಯ ಅಮಲಿನಲ್ಲಿದ್ದ ನವದಂಪತಿಗಳಿಗೆ ಯಾರ ಮಾತುಗಳೂ ಪರಿಣಾಮ ಮಾಡಲಿಲ್ಲ. ಜೊತೆಗೆ ಅವರಿಗೆ ಯಾರ ಹಂಗೂ ಬೇಕಾಗಿರಲಿಲ್ಲ. ನಾವು ಸರ್ವಸ್ವತಂತ್ರರು, ಸ್ವಪ್ರಯತ್ನದಿಂದ ಕಾಲಮೇಲೆ ನಿಂತಿರುವವರು ಎಂದು ತಮಗೆತಾವೇ ಸಮಾಧಾನ ಮಾಡಿಕೊಂಡರು.

ಇಬ್ಬರೂ ಒಂದೇ ಕಾಲೇಜಿನಲ್ಲಿ ಉದ್ಯೋಗಸ್ಥರಾಗಿದ್ದರಿಂದ ಒಟ್ಟಿಗೆ ಹೋಗುವುದು ಬರುವುದು ಮೊದಲಿನಂತೆ ಇತ್ತು. ಇತರ ಸಮಾಜಮುಖಿ ಕೆಲಸಗಳಲ್ಲಿ ಭಾಗವಹಿಸುವುದನ್ನು ಮಾಡುತ್ತಾ ಬದುಕಿನ ಬಂಡಿಯನ್ನು ಎಳೆಯಲಾರಂಭಿಸಿದರು.

ಅರುಣಾಳು ಅಂದುಕೊಂಡಂತೆ ಯಾವ ಜಂಝಾಟವಿಲ್ಲದೆ ನಡೆದುಕೊಂಡು ಬರುತ್ತಿದ್ದ ಸಂಸಾರ ಮಗಳು ಹುಟ್ಟಿದ ಮೇಲೆ ಸ್ವಲ್ಪ ಬದಲಾವಣೆಗಳು ಕಾಣಿಸಿದವು. ಅಷ್ಟರಲ್ಲಿ ಕಮಲಾಕರನಿಗೆ ಗುಲ್ಬರ್ಗಾ ಕಾಲೇಜಿಗೆ ವರ್ಗವಾಯಿತು. ಯಾರನ್ನು ಹಿಡಿದು ಏನು ವಶೀಲಿ ಹಚ್ಚಿದನೋ ಅರುಣಾಳನ್ನೂ ಅದೇ ಕಾಲೇಜಿಗೆ ವರ್ಗಮಾಡಿಸಿಕೊಂಡು ಇಬ್ಬರೂ ಒಟ್ಟಿಗೆ ಅಲ್ಲಿಗೆ ಹೋಗುವಂತೆ ಮಾಡಿದನು ಕಮಲಾಕರ.


ಮಗಳು ಅಮೃತಾಳೊಂದಿಗೆ ಗುಲ್ಬರ್ಗಾ ನಗರದಲ್ಲಿ ವಾಸ್ತವ್ಯ ಹೂಡಿದರು. ಆಗಿನಿಂದ ಅರುಣಾಳಿಗೆ ಜವಾಬ್ದಾರಿ ಹೆಚ್ಚಾಗಿತ್ತು. ಕರುಣಾಕರನೊಟ್ಟಿಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಆಗುತ್ತಿರಲಿಲ್ಲ. ಕಾಲೇಜಿನ ಡ್ಯೂಟಿ, ಮನೆಗೆಲಸ, ಮಗಳನ್ನು ಸಂಭಾಳಿಸುವುದು ಇದರಲ್ಲಿಯೇ ದಿನಪೂರ್ತಿ ಕಳೆದುಹೋಗುತ್ತಿತ್ತು.

ಕಾಲೇಜಿನ ಕೆಲಸದ ಮಧ್ಯೆ ಬಿಡುವು ದೊರೆತಾಗಲೆಲ್ಲ ಕಮಲಾಕರ ಧಾರವಾಡಕ್ಕೆ ದೌಡಾಯಿಸುತ್ತಿದ್ದ. ಜೊತೆಗೆ ಗುಲ್ಬರ್ಗಾದಲ್ಲಿಯೂ ಅವನ ಸೇವಾಕಾರ್ಯಗಳನ್ನು ವಿಸ್ತರಿಸಿಕೊಂಡಿದ್ದ. ಸ್ವಲ್ಪ ದಿನಗಳಲ್ಲೇ ಸುತಮುತ್ತೆಲ್ಲ ಜನರು ಅವನಿಗೆ ಪರಿಚಿತರಾಗಿಬಿಟ್ಟರು.

ಹಲವು ವರ್ಷಗಳುರುಳಿದಂತೆ ಕಮಲಾಕರನ ಮತ್ತೊಂದು ಮುಖದ ಪರಿಚಯವಾಗತೊಡಗಿತು. ಸೇವಾಕಾರ್ಯಗಳಿಗಾಗಿ ಅನುಕೂಲಸ್ಥ ದಾನಿಗಳಿಂದ ಧಾರಾಳವಾಗಿ ವಂತಿಕೆಗಳನ್ನು ವಸೂಲಿಮಾಡುತ್ತಿದ್ದ. ಅದಕ್ಕೆ ತನ್ನ ಒಂದು ಬಿಡಿಕಾಸನ್ನೂ ಸೇರಿಸುತ್ತಿರಲಿಲ್ಲ. ರಕ್ತದಾನ, ನೇತ್ರದಾನ, ಉಚಿತ ತಪಾಸಣೆ ಚಿಕಿತ್ಸೆಗಳಿಗಾಗಿ ಕ್ಯಾಂಪುಗಳನ್ನು ಆಯೋಜಿಸುತ್ತಿದ್ದ. ವೈದ್ಯರುಗಳನ್ನು ಸಂಪರ್ಕಿಸಿ ಅವರನ್ನು ಮಾತುಗಳಿಂದ ಮೋಡಿಮಾಡಿ ಅವರ ಸೇವೆಯನ್ನು ಕ್ಯಾಂಪುಗಳಿಗೆ ಬಳಸಿಕೊಳ್ಳುತ್ತಿದ್ದ. ಇವೆಲ್ಲದರ ಖರ್ಚುವೆಚ್ಚಗಳನ್ನು ಉದಾರ ದೇಣಿಗೆದಾರರ ಹಣದಲ್ಲಿ ನಿರ್ವಹಿಸಿ ಇದರ ಶ್ರೇಯವನ್ನು ಮಾತ್ರ ತಾನು ಗಿಟ್ಟಿಸುತ್ತಿದ್ದ. ಸಂಗ್ರಹಿಸಿದ ದೇಣಿಗೆಯ ಲೆಕ್ಕವನ್ನು ಯಾರಿಗೂ ಒಪ್ಪಿಸಬೇಕಾಗಿರಲಿಲ್ಲ. ಜನರೆಲ್ಲ ಇವನ ಸೇವಾಕಾರ್ಯವನ್ನು ಹೊಗಳಿದ್ದೇ ಹೊಗಳಿದ್ದು. ಆದರೆ ಇದರಿಂದ ಅವನು ಒಳಗಂಟೊಂದನ್ನು ಮಾಡಿಕೊಂಡದ್ದು ಯಾರಿಗೂ ತಿಳಿಯುತ್ತಿರಲಿಲ್ಲ. ದೊಡ್ಡ ದೊಡ್ಡ ಕುಳಗಳಿಂದ ಓದುವ ವಿದ್ಯಾರ್ಥಿಗಳಿಗೆ ಧನಸಹಾಯ, ಶಾಲಾ ಸಂಸ್ಥೆಗಳಿಗೆ ನೆರವು, ವೃದ್ಧಾಶ್ರಮದಂತಹ ಸಂಸ್ಥೆಗಳಿಗೆ ಅಗತ್ಯ ಸಹಾಯ ನೀಡುವುದು ಎಲ್ಲವೂ ಧರ್ಮಾರ್ಥವೇ. ಆದರೆ ಇವೆಲ್ಲವುಗಳ ಹಿಂದೆ ಕಮಲಾಕರನ ಪುಟ್ಟ ಗಂಟು ಹಿಗ್ಗುತ್ತಲೇ ಇತ್ತು. ಇದು ಹೊರಗಿನವರಿಗ್ಯಾರಿಗೂ ತಿಳಿಯದಂತೆ ಸರಳವಾಗಿದ್ದ. ಇದರಿಂದ ಅವನ ಬಗ್ಗೆ ಯಾರಿಗೂ ಅನುಮಾನ ಬರುತ್ತಿರಲಿಲ್ಲ. ಅವನಿಗೆ ಯಾವುದೇ ದುರಭ್ಯಾಸವಾಗಲೀ, ದುಶ್ಚಟಗಳಾಗಲೀ ಇರಲಿಲ್ಲ. ಅವನ ಮೃದು ಭಾಷೆ, ವಿನಯತನ, ಸರಳ ನಡೆನುಡಿಗಳು, ಎಲ್ಲರನ್ನು ಮರುಳುಮಾಡಿದ್ದವು.

ಈ ಎಲ್ಲ ಅವತಾರಗಳ ನಿಜರೂಪು ಈಗ ಅರುಣಾಳಿಗೆ ತಿಳಿಯತೊಡಗಿತ್ತು. ಈ ವಿಷಯವಾಗಿ ಆಗೀಗ ಗಂಡಹೆಂಡತಿಯ ನಡುವೆ ಮಾತ್ರ ಮಾತುಕತೆ ನಡೆಯುತ್ತಿತ್ತು. ಆಗೆಲ್ಲ ಅವನು ಮೃಗೀಯ ವರ್ತನೆಯಿಂದ ಅವಳನ್ನು ಹಿಂಸಿಸಿ ಬಾಯಿ ಮುಚ್ಚಿಸುತ್ತಿದ್ದ. ಅವನ ಕುಡಿತದ, ಅವಾಚ್ಯ ಶಬ್ದಗಳ ಪ್ರಯೋಗ ಮನೆಯೊಳಗೇ ಸೀಮಿತವಾಗಿತ್ತು. ಹೊರಗಿನವರಿಗೆ ಅವನ ಬಣ್ಣವೇ ಬೇರೆಯಾಗಿತ್ತು. ಅವಳು ಒಮ್ಮೆ ಅವನಿಗೆ ಕಾಣದಂತೆ ಈ ವ್ಯವಹಾರಗಳ ಒಂದು ಪುಟ್ಟ ವೀಡಿಯೋ ಮಾಡಿಟ್ಟಿದ್ದನ್ನು ಯಾವುದೋ ಮಾಯದಲ್ಲಿ ಎಗರಿಸಿಬಿಟ್ಟಿದ್ದ. ಅದಕ್ಕಾಗಿ ಸಾಕಷ್ಟು ಪೆಟ್ಟುಗಳನ್ನು ಅವಳು ತಿನ್ನಬೇಕಾಯಿತು. ಅಲ್ಲದೆ ಅಂದಿನಿಂದ ಇವಳ ಮೇಲೆ ಒಂದು ಹದ್ದಿನ ಕಣ್ಣಿಟ್ಟಿದ್ದ. ಹೊರಗಡೆ ಅದೇನು ಬಿಗಿಹಿಡಿತವಿಟ್ಟಿದ್ದನೋ ದೇವರೇ ಬಲ್ಲ, ಎಲ್ಲರೂ ಈತನನ್ನು ಮಹಾತ್ಮನಂತೆ ಕಾಣುತ್ತಿದ್ದರು. ಈ ಗೋಮುಖ ವ್ಯಾಘ್ರನ ಅಸಲಿಯತ್ತನ್ನು ಅರಣಾ ತೋರಿಸಲು ಸಾಧ್ಯವಿಲ್ಲದೆ ಮತ್ತು ಅವನನ್ನು ಬಿಟ್ಟು ಹೋಗಲಾರದೆ ಒಳಗೇ ನೊಂದುಕೊಂ ಸಹಿಸುತ್ತಾ ದಿನಗಳೆಯುತ್ತಿದ್ದಳು. ಜೀವ ಕಳೆದುಕೊಂಡು ಮುಕ್ತಿ ಪಡೆಯೋಣವೆಂದರೆ ಪುಟ್ಟ ಮಗಳು ಕಣ್ಮುಂದೆ ಬರುತ್ತಿದ್ದಳು. ತಾನೇ ತೋಡಿಕೊಂಡ ಹಳ್ಳಕ್ಕೆ ತಾನಾಗಿಯೇ ಬಿದ್ದು ಒದ್ದಾಡುವಂತಾಗಿತ್ತು. ಇಂತಹ ವಾತಾವರಣದಲ್ಲಿ ತನ್ನ ಮಗಳು ಬೆಳೆಯುವುದು ಬೇಡವೆಂದು ಹಠಹಿಡಿದು ಕಮಲಾಕರನ ವಿರೋಧದ ನಡುವೆಯೇ ಮಗಳನ್ನು ರೆಸಿಡೆನ್ಷಿಯಲ್ ಶಾಲೆಯೊಂದಕ್ಕೆ ಸೇರಿಸಿ ಓದಿಸುವುದರಲ್ಲಿ ಸಫಲಳಾದಳು. ಮಗಳು ಉತ್ತಮವಾದ ಪದವಿ ಪಡೆದು ಉದ್ಯೋಗ ಗಿಟ್ಟಿಕೊಂಡು ಕೆಲಸ ಮಾಡುತ್ತಿದ್ದಳು.

ಸುತ್ತುವರೆದಿದ್ದ ಅವನ ಅಭಿಮಾನಿ ಬಳಗದ ಪ್ರಪಂಚದಿಂದ ಹೊರಬರಲಾಗದೆ ಒಳಗೊಳಗೇ ದಾವಾಗ್ನಿ ಇಟ್ಟುಕೊಂಡು ಸಮಯ ಕಳೆಯುತ್ತಿದ್ದಳು. ಶುದ್ಧ ಹಸ್ತನೆಂದು ತೋರುತ್ತಾ ಹೊರಗಿನವರ ಕಣ್ಣಿಗೆ ಮಣ್ಣೆರಚುವ ಸಲುವಾಗಿ ತಾನಿರಲು ಸಾಧಾರಣ ಬಾಡಿಗೆ ಮನೆ, ಹಳೆಯದೊಂದು ಕಾರು, ತೊಡುತ್ತಿದ್ದದ್ದು ಸಾಧಾರಣವಾದ ಉಡುಪುಗಳು, ಮಾತುಮಾತಿನಲ್ಲೂ ವಿನಯ ತುಳುಕುವಂತೆ ಮೃದುನುಡಿಗಳು, ಸಮಾಜದಲ್ಲಿ ದೊಡ್ಡವರ ಕೆಲವು ಗುಪ್ತವಾದ ಹಳವಂಡಗಳನ್ನು ಹೇಗೋ ಪತ್ತೆಮಾಡಿ ಅದನ್ನೇ ಚಲಾಯಿಸುತ್ತ ಅವರನ್ನು ಬ್ಲಾಕ್ ಮೇಲ್ ಮಾಡಿ ಅವರಿಂದ ಹಣ ವಸೂಲಿ ಮಾಡುತ್ತಿದ್ದ ಚಾಣಾಕ್ಷತೆ ಅವನಿಗಿತ್ತು. ಇದನ್ನೆಲ್ಲ ಕಂಡು ಅಸಹ್ಯಪಟ್ಟು ಅವನ ದುಡಿಮೆಯ ಯಾವ ಹಣವನ್ನೂ ತಾನು ಉಪಯೋಗಿಸುವುದನ್ನು ನಿಲ್ಲಿಸಿದಳು. ಮನೆಯಲ್ಲಿ ಅಡುಗೆಯವಳನ್ನು ಇಟ್ಟು ಊಟೋಪಚಾರ ಮಾಡುತ್ತಿದ್ದುದು ಬಿಟ್ಟರೆ ಅರುಣಾಳೊಡನೆ ಮಾತುಕತೆ ನಿಲ್ಲಿಸಿ ಎಷ್ಟೋ ಕಾಲವಾಯಿತು. ನೋಡುವವರಿಗೆ ಅವರದ್ದು ಅನುಕೂಲ ದಾಂಪತ್ಯ, ಮನೆಯೊಳಗಡೆ ಅವನ ಇರುವಿಕೆಯೇ ಅಪಥ್ಯ ಎನ್ನುವ ಹಂತ ತಲುಪಿತ್ತು. ಹೂಂ ದೇವರಿಗೇ ಇದೆಲ್ಲ ಕಾಣಲು ಸಾಕಾಯಿತೇನೋ ಎಂಬಂತೆ ಯಾವುದೋ ಒಂದು ಸಮಾರಂಭಕ್ಕೆ ಹೋದವನು ಅಲ್ಲಿಯೇ ವೇದಿಕೆಯ ಮೇಲೇ ಕುಸಿದು ಅಸುನೀಗಿದ. ಜೊತೆಗೆ ಅವನು ಬರೆದಿಟ್ಟದ್ದ ದೇಹ ಮತ್ತು ಅಂಗಾಂಗದಾನದ ಪತ್ರವೂ ಯಾರಬಳಿಯಲ್ಲಿತ್ತೋ ಸಿಕ್ಕಿತು. ಅದನ್ನು ಚಾಚೂ ತಪ್ಪದೆ ಅವನ ಪಟಾಲಮ್ಮಿನ ಜನ ಅದು ಅವನ ಅಂತಿಮ ಇಚ್ಛೆಯೆಂದು ಹಾಡಿಹೊಗಳುತ್ತಾ ನೆರವೇರಿಸಿದರು. ಅವನನ್ನು ಮಹಾತ್ಮನ ಮಟ್ಟಕ್ಕೆ ಕೊಂಡೊಯ್ದರು. ಅದರಲ್ಲಿ ಅರುಣಾ ಮತ್ತು ಮಗಳು ನಿಮಿತ್ತ ಮಾತ್ರವೆಂಬಂತೆ ಪಾಲ್ಗೊಳ್ಳಬೇಕಾಯಿತು. ಯಾವುದೋ ಜನ್ಮದ ಕರ್ಮವೆಂದು ಅಲ್ಲಿ ಕಲ್ಲಿನಂತೆ ನಿಶ್ಚಲವಾಗಿ ಕುಳಿತಿದ್ದರು.



ಅಲ್ಲಿ ಸೇರಿದ್ದವರೆಲ್ಲರ ಬಾಯಲ್ಲಿ ಒಂದೇ ಮಾತು. ಕಮಲಾಕರರ ಸಾವು ಆಕಸ್ಮಿಕವಾಗಿದ್ದು ಅಭಿಮಾನಿಗಳಾದ ನಮಗೇ ಭರಿಸಲಾಗುತ್ತಿಲ್ಲ ಇನ್ನು ಜೀವನಪೂರ್ತಿ ಜೋಡಿ ಹಕ್ಕಿಗಳಂತಿದ್ದ ಅವರ ಪತ್ನಿಗೆ ಏನಾಗಿರಬೇಡ, ಅದಕ್ಕೇ ಅವರು ದುಃಖ ತಡೆಯಲಾರದೆ ಮೌನಕ್ಕೆ ಶರಣಾಗಿದ್ದಾರೆ ಎಂದು ಸಾಕಷ್ಟು ಅನುಕಂಪ ತೋರಿದ್ದರು. ಎಲ್ಲವೂ ಮುಗಿದ ನಂತರ ಬ್ಯಾಂಕಿನ ಕೆಲಸ, ಮನೆಯ ವ್ಯವಸ್ಥೆ, ಅನಿವಾರ್ಯ ಕೆಲಸಗಳೆಲ್ಲ ಮುಗಿದವು. ಆಗ ಬಿಚ್ಚಿಬೀಳುವ ಸರದಿ ಅರುಣಾಳಿಗಾಯಿತು. ಕಾಲೇಜಿನಲ್ಲಿ ಕೆಲಸ ಮಾಡಿದ ಉಪನ್ಯಾಸಕ ಭಡ್ತಿ ಪಡೆದು ಪ್ರೊಫೆಸರನಾಗಿ ಸಂಬಳ ಪಡೆದವನ ಅಕೌಂಟಿನಲ್ಲಿ ಕೋಟಿಗಟ್ಟಲೆ ಹಣ, ಅಲ್ಲದೆ ಮನೆಯಲ್ಲಿ ಅವನ ಖಾಸಗಿ ಕ್ಯಾಷ್‌ಬಾಕ್ಸಿನಲ್ಲಿ ಕಟ್ಟು ಕಟ್ಟು ಹಣದ ನೋಟುಗಳು. ಅವ್ವಯ್ಯಾ ಅರುಣಾ ತನ್ನ ಮನಸ್ಸಿನಲ್ಲಿಯೇ ತಡಮಾಡದೆ ಯೋಜನೆಯೊಂದನ್ನು ಸಿದ್ಧಪಡಿಸಿದಳು. ಅದನ್ನು ಮಗಳಿಗೆ ಫೋನ್ ಮಾಡಿ ತಿಳಿಸಿದಳು. ಇವತ್ತು ಮಗಳು ಬರುತ್ತಾಳೆ, ಅವಳ ಚಿಂತೆಯೇನೂ ಇಲ್ಲ. ಆದರೆ ಈ ಮನುಷ್ಯನ ವಾರ್ಷಿಕ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ನೀಡದೇ ಇರಲಾರರು. ನನಗೆ ಅದರಲ್ಲಿ ಭಾಗವಹಿಸಲು ಇಷ್ಟವಿಲ್ಲ. ಅದಕ್ಕೆ ಏನಾದರೂ ಉಪಾಯ ಮಾಡಿ ತಪ್ಪಿಸಿಕೊಳ್ಳಬೇಕು. ಇಲ್ಲವಾದರೆ ವೇದಿಕೆಯ ಮೇಲೆ ನನ್ನಿಂದಲೂ ಆ ಮನುಷ್ಯನ ಗುಣಗಾನ ಮಾಡಲು ಒತ್ತಾಯಿಸುವುದು ಖಂಡಿತ. ಅವರೆಲ್ಲ ಇತಿಮಿತಿಮೀರಿ ಹೊಗಳಿಕೆಯ ಮಹಾಪೂರವನ್ನೇ ಹರಿಸುತ್ತಾರೆ. ಅವನ ನಿಜರೂಪ ಕಂಡಿದ್ದ ನನಗೆ ಅವನ್ನು ಕೇಳಿಸಿಕೊಳ್ಳಲೂ ಸಾಧ್ಯವಿಲ್ಲ. ಮಗಳು ಅಮೃತಾಳಿಂದಲೇ ಯೋಜನೆ ರೂಪಿಸಬೇಕು ಹೌದು ಎಂದು ಆಲೋಚನೆಯಲ್ಲಿರುವಾಗಲೇ

ಅಮ್ಮಾ ಇದೇನು ಮುಂದಿನ ಬಾಗಿಲು ಹಾರುಹೊಡೆದು ಏನು ಮಾಡುತ್ತಿದ್ದೀಯೆ? ಅಮೃತಾಳ ಧ್ವನಿ ಅರುಣಾಳನ್ನು ಹೊರ ಪ್ರಪಂಚಕ್ಕೆ ಎಳೆದು ತಂದಿತು.

ಮಗಳೇ ಬಂದೆಯಾ, ಅದೇ ಹಳೆಯ ನೆನಪಿನ ಹಾಳೆಗಳನ್ನು ತಿರುವಿ ಹಾಕುತ್ತಿದ್ದೆ. ಎನ್ನುತ್ತಾ ಮಗಳನ್ನು ಬರಮಾಡಿಕೊಂಡಳು.

ತಿಂಡಿ ಕಾಫಿ ಎಲ್ಲವನ್ನೂ ಮುಗಿಸಿಕೊಂಡೇ ಬಂದಿದ್ದೇನೆ. ಮತ್ತೇನೂ ಬೇಡ. ಮಧ್ಯಾಹ್ನ ಊಟ ಮಾಡಿದರಾಯಿತು. ಅದೇನು ಅರ್ಜೆಂಟಾಗಿ ಬರಲು ಹೇಳಿದೆ? ಎಂದು ಪ್ರಶ್ನಿಸಿದಳು ಅಮೃತಾ.

ಒಂದು ನಿಮಿಷ ಬಂದೆ ಎಂದು ರೂಮಿನಿಂದ ಒಂದು ಫೈಲ್ ತಂದು ಮಗಳ ಮುಂದಿಟ್ಟಳು ಅರುಣಾ. ಎಲ್ಲವನ್ನೂ ಸಾವಕಾಶವಾಗಿ ಓದಿಮುಗಿಸಿದ ಅಮೃತಾಳಿಗೆ ತನ್ನಮ್ಮನ ನಿರ್ಧಾರ ಸರಿಯೆನ್ನಿಸಿತು. ಮೊದಲೇ ಇದರ ಅಲ್ಪ ಸುಳುಹು ತಿಳಿದಿತ್ತು. ಈಗ ಎಲ್ಲವೂ ವಿಷದವಾಗಿ ವೇದ್ಯವಾಯಿತು.

ಅಮ್ಮಾ .. ಎಲ್ಲಾ ಸರಿ, ಅಪ್ಪನ ಹಣವೆಲ್ಲವನ್ನು ಯಾವುದೋ ಪೂನಾದಲ್ಲಿರುವ ಆಶ್ರಮಕ್ಕೆ ದಾನಮಾಡಲು ಬರೆದಿದ್ದೀರಿ. ಅಲ್ಲಿಯೇ ನಿಮ್ಮ ವಾಸ್ತವ್ಯ ಹೂಡುವ ಸಿದ್ಧತೆ ಮಾಡಿಕೊಂಡಿದ್ದೀರಾ? ಮತ್ತೆ ಅದೂ ಅಪ್ಪನ ದುಡಿಮೆಯಲ್ಲೇ

ಇಲ್ಲಾ ಮಗಳೇ, ಅವರ ದುಡಿಮೆಯ ಚಿಕ್ಕಾಸನ್ನೂ ನಾನು ಮುಟ್ಟುವುದಿಲ್ಲ. ನಾನಿರುವವರೆಗೂ ಅವರ ಪಾಲಿನ ಕುಟುಂಬ ಪೆನ್ಷನ್ನೂ ಬರುತ್ತದೆ. ನಾನದನ್ನೂ ಆಶ್ರಮದ ಉಪಯೋಗಕ್ಕೆ ಕೊಡುತ್ತೇನೆ. ನನಗೆ ಸ್ವಯಂನಿವೃತ್ತಿಯಿಂದ ಬರುವ ಪೆನ್ಷನ್ನಿನಿಂದ ನನ್ನ ಜೀವನ ನಡೆಯುತ್ತೆ. ಸ್ವಯಂ ನಿವೃತ್ತಿಗೆ ಅರ್ಜಿ ಪಡೆದುಕೊಂಡಿದ್ದೇನೆ. ಎಂದಳು ಅರುಣಾ.

ಹಾಗಾದರೆ ನೀವು ನನ್ನೊಡನೆ ಇರಲು ಬರುವುದಿಲ್ಲ ಇಲ್ಲಾ ಮಗಳೇ ನಿನಗೆ ಬದುಕನ್ನು ರೂಪಿಸಿಕೊಳ್ಳುವ ತಿಳಿವಳಿಕೆಯಿದೆ. ಇಷ್ಟವಾದರೆ ಯೋಗ್ಯನೊಬ್ಬನನ್ನು ಮದುವೆಯಾಗು. ಇಲ್ಲವೆಂದರೆ ಬೇಡಬಿಡು. ನಿರ್ಧಾರ ನಿನ್ನದು. ನನ್ನ ಶೇಷ ಬದುಕು ನನ್ನದು. ಹಿಂದಿನದ್ದನ್ನು ಮರೆಯಬೇಕಿದೆ. ನನ್ನದಾಗಿದ್ದ ಒಡವೆ, ಉಳಿತಾಯದ ಹಣವೆಲ್ಲವೂ ನಿನ್ನದೇ. ನನ್ನ ಉಡುಪುಗಳನ್ನು ಬಿಟ್ಟು ಬೇರೆ ಏನನ್ನೂ ನಾನು ಕೊಂಡೊಯ್ಯುವುದಿಲ್ಲ. ಅದೆಲ್ಲ ನಿರ್ಧಾರವಾಗಿದೆ. ಈಗ ಸದ್ಯ ನಿನ್ನಿಂದ ನನಗೊಂದು ಸಲಹೆ ಅಗತ್ಯವಿದೆ. ಇವತ್ತಿನ ಪೇಪರ್ ನೋಡಿದೆಯಾ? ವಿಷಯವೂ ನಿನಗೆ ಗೊತ್ತಾಗಿರಬೇಕು. ಧಾರವಾಡದಿಂದ ನಿನ್ನಪ್ಪನ ಹಿಂಬಾಲಕರು, ಅಭಿಮಾನಿಗಳು ಮನೆಗೆ ಬರಬಹುದು. ನನ್ನನ್ನು ಆಹ್ವಾನಿಸುತ್ತಾರೆ. ನಾನಂತೂ ಅವರ ಫೋನ್ ಕರೆಗಳಿಗೆ ಉತ್ತರಿಸಲಿಲ್ಲ. ನನ್ನ ಮೊಬೈಲ್ ನಂಬರನ್ನು ಯಾರಿಗೂ ನೀಡಬೇಡಿರೆಂದು ಕಾಲೇಜಿನ ಸಿಬ್ಬಂದಿಯವರೆಲ್ಲರಿಗೂ ತಿಳಿಸಿದ್ದೇನೆ. ಅವರೆಲ್ಲರೂ ಸಹಕರಿಸುವುದಾಗಿ ಒಪ್ಪಿಕೊಂಡಿದ್ದಾರೆ. ಈಗ ಅವರು ಬಂದಾಗ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಆ ಪುಣ್ಯಾತ್ಮನ ಬಿರುದು ಬಾವಲಿಗಳನ್ನು ಮತ್ತೊಮ್ಮೆ ಕೇಳಲು ನನಗೆ ಸಾಧ್ಯವಿಲ್ಲ. ಹೇಳು ನಾನೇನು ಮಾಡಬಹುದು.

ತಾಯಿಯ ಭಾವನೆಗಳನ್ನು ಅರ್ಥಮಾಡಿಕೊಂಡ ಅಮೃತಾ ಒಂದು ನಿಮಿಷ ಆಲೋಚಿಸಿ ಅಮ್ಮನ ಕಿವಿಯಲ್ಲಿ ಏನೋ ಉಪಾಯವನ್ನು ಸೂಚಿದಳು. ಹಾಗೇ ಮಾಡುತ್ತೇನೆ ಎಂದು ಒಪ್ಪಿಕೊಂಡಳು ಅರುಣಾ.

ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ಹೊರಗಡೆ ಗೇಟಿನ ಸದ್ದಾಯಿತು. ಅಮ್ಮಾ ಅಭಿಮಾನಿಗಳ ಸಂಘದವರು ಬರುತ್ತಿದ್ದಾರೆ. ನೀನು ರೂಮಿಗೆ ಹೋಗಿ ನಾನು ಹೇಳಿದಂತೆ ಮಾಡು ಎಂದಳು. ಅದರಂತೆ ಅರುಣಾ ತನ್ನ ರೂಮಿನೊಳಕ್ಕೆ ಹೋದಳು.

ಬಾಗಿಲು ತೆರೆದ ಅಮೃತಾಳನ್ನು ಕಂಡವರೇ ನೀನೂ ಬಂದಿದ್ದೀಯಾಮ್ಮ, ನಮ್ಮ ಕೆಲಸ ಹಗೂರಾಯಿತು. ಮೇಡಂಗೆ ಕೇಳಿ ನಿನ್ನನ್ನು ಆಹ್ವಾನಿಸಬೇಕೆಂದಿದ್ದೆವು. ಎಂದು ಹೇಳುತ್ತ ಒಳಬಂದು ಹಾಲಿನಲ್ಲಿ ಕುಳಿತರು.

ಸ್ವಲ್ಪ ಹೊತ್ತು ಲೋಕಾಭಿರಾಮವಾದ ಮಾತುಕತೆ ನಡೆಯಿತು. ಯಥಾಪ್ರಕಾರ ಕಮಲಾಕರರ ಗುಣಗಾನ. ನಿಮ್ಮ ತಂದೆಯವರು ಗುಲ್ಬರ್ಗಾಕ್ಕೆ ಬಂದವರು ಇಲ್ಲಿಯೇ ಠಿಕಾಣಿ ಹೂಡಿಬಿಟ್ಟರೆನ್ನುವಷ್ಟರಲ್ಲಿ ಪ್ರಮೋಷನ್ ಬಂದಾಗ ಮತ್ತೆ ಧಾರವಾಡಕ್ಕೆ ಬರಬಹುದಿತ್ತು. ಅದುಬಿಟ್ಟು ಮೈಸೂರಿಗೆ ಇಬ್ಬರೂ ಬಂದು ನೆಲೆಸಿದರು. ಆ ನಂತರ ಎಲ್ಲಿಗೂ ಹೋಗಲಿಲ್ಲ. ಈಗ ಎಲ್ಲವೂ ಮುಗಿದುಹೋದ ಕಥೆ. ಅದು ಸರಿ ಮೇಡಂ ಎಲ್ಲಿಯೂ ಕಾಣಿಸಲಿಲ್ಲ ಮಲಗಿದ್ದಾರೇನು? ಎಂದು ಕೇಳಿದರು.

ಅಯ್ಯೋ ಆ ವಿಷಯ ನಿಮಗೆ ಹೆಂಗೆ ಹೇಳಲಿ ಸಾರ್, ನಿಮ್ಮ ಹೆಸರೇನೋ ಮರೆತಿದ್ದೇನೆ ಎಂದಳು.

ಗಣೇಶಾಂತ, ಇವರು ವೀರೇಶ್, ಅವರು ಗಂಗಣ್ಣ

ಹಾ ! ಈಗ ನೆನಪಿಗೆ ಬಂತು. ದಯವಿಟ್ಟು ಬನ್ನಿ ಅಮ್ಮನನ್ನು ತೋರಿಸುತ್ತೇನೆ ಎಂದು ಅರುಣಾಳ ರೂಮಿನೊಳಕ್ಕೆ ಕರೆದುಕೊಂಡು ಹೋದಳು. ಒಳಗೆ ದೀವಾನದ ಮೇಲೆ ಒಂದು ಬ್ಲಾಂಕೆಟ್ ಹೊದ್ದು ಕುಳಿತಿದ್ದ ಅರುಣಾ ಕಾಣಿಸಿದರು.

ನಮಸ್ತೆ ಮೇಡಂ, ಏಕೆ ಹುಷಾರಿಲ್ಲವೇ? ಬಹಳಷ್ಟು ಸಾರಿ ತಮಗೆ ಫೋನ್ ಮಾಡಿದ್ದೆವು. ಯಾಕೋ ಸಿಗಲೇ ಇಲ್ಲ. ಇಲ್ಲಿಗೂ ಬಂದಿದ್ದೆವು. ಭೇಟಿಯಾಗಲು ಸಾಧ್ಯವಾಗಲಿಲ್ಲ, ಪಕ್ಕದವರು ಊರಿಗೆ ಹೋಗಿದ್ದಾರೆ ಎಂದು ಹೇಳಿದರು. ಬಹಳಷ್ಟು ವೀಕ್ ಆಗಿದ್ದೀರಂತ ಕಾಣುತ್ತದೆ. ಕಾಲೇಜಿನಿಂದ ಸ್ವಯಂ ನಿವೃತ್ತಿ ಪಡೆದುಕೊಂಡಿರೆಂದು ತಿಳಿಯಿತು ನಿಜವೇ? ಎಂದೆಲ್ಲ ಪ್ರಶ್ನಿಸಿದರು.

ಊಹುಂ. ಒಂದೇ ಒಂದು ಸೊಲ್ಲೂ ಅರುಣಾಳ ಬಾಯಿಂದ ಹೊರಬರಲಿಲ್ಲ, ಕುಳಿತಿದ್ದ ಭಂಗಿಯೂ ಬದಲಾಗಲಿಲ್ಲ. ಬಿಟ್ಟಕಣ್ಣು ಬಿಟ್ಟಹಾಗೆ ನೆಟ್ಟ ನೋಟದಿಂದ ಕದಲಲಿಲ್ಲ. ಅವಳಿಂದ ಯಾವುದೇ ಪ್ರತಿಕ್ರಿಯೆಯೂ ಬರಲಿಲ್ಲ.

ಇದೇನಮ್ಮಾ ಹೀಗೆ? ನಮಗೆ ನಂಬಲಾಗುತ್ತಿಲ್ಲ. ಏನಾಗಿದೆ ಮೇಡಂಗೆ? ಎಂದು ಎಲ್ಲರೂ ಒಕ್ಕೊರಲಿನಿಂದ ಕೇಳಿದರು.

ಹೂಂ ಸರ್, ಏನೂಂತ ಹೇಳಲಿ.. ನಮ್ಮ ತಂದೆಯವರು ಅದೇ ನಿಮ್ಮ ಅಭಿಮಾನಿ ದೇವರು ಸ್ವರ್ಗಸ್ಥರಾದ ಮೇಲೆ ಸ್ವಲ್ಪ ದಿನ ಇವರು ಚೆನ್ನಾಗಿದ್ದರು. ಕ್ರಮೇಣ ನಿಧಾನವಾಗಿ ಮೌನಕ್ಕೆ ಜಾರುತ್ತಾ ಹೋದರು. ದೈಹಿಕವಾಗಿ ಯಾವ ತೊಂದರೆಯೂ



ಕಾಣಲಿಲ್ಲ. ಆದರೆ ಮಾನಸಿಕವಾಗಿ ತುಂಬ ಕುಗ್ಗಿ ಹೋಗಿದ್ದಾರೆ. ಬೆಂಗಳೂರಿನಲ್ಲಿ ಸ್ಪೆಷಲಿಸ್ಟ್ ಬಳಿ ಕೌನ್ಸಿಲಿಂಗ್ ಮಾಡಿಸುತ್ತಿದ್ದೇನೆ. ಇಲ್ಲಿ ಕೆಲವು ಮನೆಗೆ ಸಂಬಂಧಪಟ್ಟ ಕೆಲಸಗಳಿದ್ದವು ಒಬ್ಬಳನ್ನೇ ಅಲ್ಲೇ ಬಿಟ್ಟು ಬರಲಾಗದೇ ಅವರನ್ನೂ ಜೊತೆಗೆ ಕರೆದುಕೊಂಡು ಬಂದಿದ್ದೇನೆ. ಅಪ್ಪ ಅಂತೂ ಹೋಗಿಬಿಟ್ಟರು, ಅಮ್ಮ ಇದ್ದೂ ಇಲ್ಲದಂತೆ ಆಗಿದ್ದಾರೆ ಎಂದು ಹೇಳುತ್ತಾ ಕೈಲಿದ್ದ ಕರ್ಚೀಫಿನಿಂದ ಮುಖ ಮುಚ್ಚಿಕೊಂಡು ಬಿಕ್ಕಿದಳು.

ಛೇ..ಛೇ..ಎಂತಹ ಕೆಲಸವಾಯಿತು. ಸರ್ ಅವರ ಅಗಲಿಕೆಯಿಂದ ಇವರಿಗೆ ಷಾಕ್ ಆಗಿರಬೇಕು. ಅಷ್ಟೊಂದು ವರ್ಷ ಒಟ್ಟಿಗೆ ಬಾಳ್ವೆ ನಡೆಸಿದವರಲ್ಲವೇ, ಹೀಗಾಗಬಾರದಿತ್ತು. ಅವರು ಖಾಯಿಲೆ ಕಸಾಲೆ ಆಗಿ ತೀರಿಹೋಗಿದ್ದರೆ ಇಷ್ಟೊಂದು ನೋವಾಗುತ್ತಿರಲಿಲ್ಲ, ಏನು ಮಾಡುವುದು ಎಂದು ಒಬ್ಬರಿಗೊಬ್ಬರು ಮುಖ ನೋಡಿಕೊಂಡರು. ಏನೋ ನಿರ್ಧರಿಸಿಕೊಂಡವರಂತೆ ಆಯಿತಮ್ಮಾ, ಮೇಡಂರವರ ಅನುಪಸ್ಥಿತಿಯಲ್ಲೇ ಸರ್‌ಗೆ ಶ್ರದ್ಧಾಂಜಲಿ ಅರ್ಪಣೆ ಮಾಡುತ್ತೇವೆ. ಇವರನ್ನು ಈ ಸ್ಥಿತಿಯಲ್ಲಿ ತೊಂದರೆ ಮಾಡಲಾಗದು. ಏನಾದರೂ ಹೆಚ್ಚು ಕಡಿಮೆಯಾದರೆ ಕಷ್ಟ, ಆದಷ್ಟು ಬೇಗ ಹುಷಾರಾಗಲಿ ಎಚ್ಚರಿಕೆಯಿಂದ ನೋಡಿಕೊಳ್ಳಮ್ಮ, ಇಲ್ಲಿ ತೆಗೆದುಕೊಳ್ಳಿ ಇದು ನನ್ನ ಕಾರ್ಡ್, ಏನಾದರೂ ಸಹಾಯ ಬೇಕಿದ್ದರೆ ನಿಸ್ಸಂಕೋಚವಾಗಿ ಫೋನ್ ಮಾಡಿ. ನಾವಿನ್ನು ಬರುತ್ತೇವೆ ಎಂದು ಅವರೆಲ್ಲ ಹೊರನಡೆದರು.

ಬಂದವರೆಲ್ಲರೂ ಹೋದರೆಂದು ಖಚಿತವಾದ ಮೇಲೆ ಅರುಣಾ ರೂಮಿನಿಂದ ಹೊರಬಂದವಳೇ ನನಗೆ ಇವರನ್ನು ನಿವಾರಿಸಿಕೊಳ್ಳಲು ನೀನು ಕೊಟ್ಟ ಸಲಹೆ ಬಹಳ ಚೆನ್ನಾಗಿ ಕೆಲಸಕ್ಕೆ ಬಂದಿತು ಮಗಳೇ. ನಿನಗೆಷ್ಟು ದನ್ಯವಾದ ಹೇಳಿದರೂ ಸಾಲದು ಎಂದು ಮಗಳನ್ನು ಅಪ್ಪಿಕೊಂಡರು.

ಹುಟ್ಟಿದಂದಿನಿಂದ ಅಮ್ಮನ ಸ್ಥಿತಿ, ಮನೆಯ ಪರಿಸ್ಥಿತಿಯನ್ನರಿತಿದ್ದ ಅಮೃತಾ ತಾಯಿಯನ್ನು ಸಮಾಧಾನಪಡಿಸುವಂತೆ ಅವಳನ್ನು ತಾನೂ ಬಿಗಿದಪ್ಪಿಕೊಂಡಳು.

ಅಂತೂ ಇಂದಿಗೆ ತಾವು ನಿರ್ಧಾರ ಮಾಡಿಕೊಂಡಂತೆ ಮುಂದಿನ ಕ್ರಮದತ್ತ ಹೆಜ್ಜೆ ಹಾಕಲು ಸಿದ್ಧರಾದರು. ಗೋಸುಂಬೆಯಂತೆ ತೋರಿಕೆಯ ಬದುಕು ನಡೆಸಿ ಜನರಿಗೆ ಮಹಾತ್ಮನಂತೆ ಪೋಸು ಕೊಡುತ್ತಿದ್ದ ಪತಿ ಕರುಣಾಕರನ ಪ್ರಭಾವದಿಂದ ಪೂರ್ತಿಯಾಗಿ ಹೊರಬಂದು ತನ್ನ ಮುಂದಿನ ಜೀವನದತ್ತ ಮುಖಮಾಡಿದಳು ಅರುಣಾ. ಅವಳ ಮನಸ್ಸಿನಲ್ಲಿ ಇಂಥಹ ಎಷ್ಟೋ ಜನ ಸಮಾಜಸೇವಕರು ಗೋಸುಂಬೆಗಳಾಗಿ ಲೂಟಿಕೋರರಾಗಿ ಮೆರೆಯುತ್ತಿದ್ದಾರೋ ಅವರಿಗೆಲ್ಲ ಇತಿಶ್ರೀ ಹಾಡುವವರು ಯಾರು ಎಂಬ ಆಲೋಚನೆ ಸುಳಿದಾಡಿತು.

**- ಬಿ.ಆರ್. ನಾಗರತ್ನ,** ಮೈಸೂರು.

## ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣ ಪ್ರದೇಶ ಸೇರಿದಂತೆ ಸುತ್ತಮುತ್ತಲಿನ ಕಸಬಾ ಹೋಬಳಿ ಗ್ರಾಮಗಳಲ್ಲಿ ಸೆ.1 ರಿಂದ 15 ರವರೆಗೆ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜು ವ್ಯತ್ಯಯವಾಗುವುದು ಎಂದು ಸಹಾಯಕ ಇಂಜಿನಿಯರ್ ದೀಪಕ್ ಅವರು ತಿಳಿಸಿದ್ದಾರೆ.



ಪ್ರಕಟಣೆಗೆ ಕೋರಿರುವ ಅವರು, ಪಟ್ಟಣ ವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕಗಳ ನಿರ್ವಹಣೆ ಕಾರ್ಯ ನಡೆಸಲಿದ್ದೇವೆ. ಅಪಘಾತಕಾರಿ ವಿದ್ಯುತ್ ಸ್ಥಳಗಳಲ್ಲಿ ಎಬಿ ಕೇಬಲ್ ಅಳವಡಿಸುವ ಕಾಮಗಾರಿ ನಡೆಸಲಾಗುವುದು. ಇದರಿಂದ ವಿದ್ಯುತ್ ಸಂಪರ್ಕ ಕಡಿತಗೊಳಿಸಬೇಕಾಗುತ್ತಿದೆ. 66/11 ಕೆವಿ ಪಟ್ಟಣ ಉಪ ವಿಭಾಗದ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಸೂರನಹಳ್ಳಿ, ನಾಗಲಾಪುರ, ಚಿಟ್ನನಹಳ್ಳಿ, ಮಲ್ಲಪ್ಪನಹಳ್ಳಿ, ರಿವರ್ ಬ್ಯಾಂಕ್‌ರಸ್ತೆ, ವಿದ್ಯುತ್‌ನಗರ, ಚಿಟ್ನನಹಳ್ಳಿ ಹೌಸಿಂಗ್‌ಬೋರ್ಡ್, ಕೆ.ಎಚ್.ಬಿ. ಬಡಾವಣೆ, ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಪಿಎಂಎವೈ ಅಕ್ರಮ: ಗ್ರಾ.ಪಂ. ಸದಸ್ಯರಿಗೆ ಸಂಬಂಧವಿಲ್ಲ

### ಸತ್ಯಾಸತ್ಯತೆ ತಿಳಿಸುವಂತೆ ಒತ್ತಾಯ | ಪಿಡಿಓ ಕುಮಾರಸ್ವಾಮಿ ವಿರುದ್ಧ ಚುನಾಯಿತ ಪ್ರತಿನಿಧಿಗಳ ಆಕ್ರೋಶ

• ಪ್ರಜೋದಯ ವರದಿ

**ಬಾಣಾವರ:** ಗ್ರಾಮ ಪಂಚಾಯಿತಿಯಲ್ಲಿ ಪಿಎಂಎವೈ ಯೋಜನೆಯಡಿ ಮನೆಗಳ ವಿತರಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಆಕ್ರೋಶಗೊಂಡ ಗ್ರಾಮ ಪಂಚಾಯಿತಿ ಸದಸ್ಯರು, ಪಿಡಿಓ ಕುಮಾರಸ್ವಾಮಿ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣದ ಸತ್ಯಾಸತ್ಯತೆಯನ್ನು ಸಾರ್ವಜನಿಕರ ಮುಂದೆ ತಿಳಿಸುವಂತೆ ಒತ್ತಾಯಿಸಿ, ಆರೋಪಕ್ಕೂ ಗ್ರಾಮ ಪಂಚಾಯಿತಿ ಸದಸ್ಯರಿಗೂ ಯಾವುದೇ ಸಂಬಂಧವಿಲ್ಲವೆಂದು ಸ್ಪಷ್ಟಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ವೀಣಾ ವಿಶ್ವನಾಥ್ ಅವರು ಮಾತನಾಡಿ, ಈ ಪ್ರಕರಣಕ್ಕೂ ಬಾಣಾವರ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೂ ಯಾವುದೇ ಸಂಬಂಧ ವಿಲ್ಲ. ಗ್ರಾಮ ಪಂಚಾಯಿತಿ ಯಾವ ಸಭೆಗಳಲ್ಲಿಯೂ ಈ ವಿಚಾರದ ಕುರಿತು ತೀರ್ಮಾನಿಸಲಾಗಿಲ್ಲ. ಆದ್ದರಿಂದ ಸಂಬಂಧಪಟ್ಟವರಿಗೆ ತಕ್ಕ ಶಿಕ್ಷೆಯಾಗಲಿ, ಆದರೆ ಪಂಚಾಯಿತಿ ಹೆಸರನ್ನು ಕೆಡಿಸಬಾರದೆಂದು ಹೇಳಿದರು.



ಗ್ರಾಮ ಪಂಚಾಯಿತಿ ಸದಸ್ಯ ಬಿ. ಆರ್.ಶ್ರೀಧರ್ ಅವರು ಮಾತನಾಡಿ, ಕೆಲವು ದಿನಗಳಿಂದ ಬಾಣಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಸಾಮಾಜಿಕ ಜಾಲತಾಣಗಳು ಮತ್ತು ಮಾಧ್ಯಮಗಳಲ್ಲಿ ಸುದ್ದಿ ಹರಿದಾಡುತ್ತಿದೆ. ಈ ವಿಷಯವಾಗಿ ಯಾವುದೇ ಮಾಹಿತಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಇಲ್ಲ. ಅಧ್ಯಕ್ಷರ ಅಥವಾ ಸದಸ್ಯರ ಪಾತ್ರವಿಲ್ಲ. ಬಾಣಾವರ ಗ್ರಾಮ ಪಂಚಾಯಿತಿ ಮೇಲೆ ನಡೆದಿರುವ ಆರೋಪಕ್ಕೂ ಶಾಸಕರಿಗೂ ಯಾವುದೇ ರೀತಿಯ ಸಂಬಂಧ ವಿಲ್ಲ. ರಾಜಕೀಯ ಪ್ರೇರಿತವಾಗಿ ಶಾಸಕರ ಮೇಲೆ ಈ ರೀತಿಯ ಆರೋಪ ಮಾಡಬಾರದು. ಪ್ರಕರಣಕ್ಕೆ ಸಂಬಂಧ ಪಟ್ಟವರು ಯಾರೇ ಆಗಿದ್ದರೂ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಶಾಸಕರ ಮೇಲೆ ಇಲ್ಲ ಸಲ್ಲದ ಆರೋಪ ಮಾಡು ವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಮತ್ತೊಬ್ಬ ಸದಸ್ಯ ಬಿ.ಆರ್. ಸುರೇಶ್ ಅವರು ಮಾತನಾಡಿ, ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಅಕ್ರಮಗಳನ್ನು ಇಲ್ಲಿನ ಸದಸ್ಯರು ಮಾಡಿಲ್ಲ. ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಈ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಬಳಿಕ ನೀರಾವರಿ, ಶಿಕ್ಷಣ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಜನ ಮೆಚ್ಚುವಂತಹ ಕೆಲಸಗಳನ್ನು ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಶಾಸಕರಿಗೆ ಬಾಣಾವರ ಗ್ರಾಮ ಪಂಚಾಯಿತಿಯ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ದಿದ್ದರೂ ಸಹ ಅವರ ಹೆಸರನ್ನು ಈ ಪ್ರಕರಣದಲ್ಲಿ ತರುವುದು ಹಾಸ್ಯಾಸ್ಪದ. ಪ್ರಕರಣದಲ್ಲಿ ಶಾಸಕರ ಪಾತ್ರವೇ ಇಲ್ಲ. ಇನ್ನು ಮುಂದೆ ಯಾವುದೇ ರೀತಿಯ ಆರೋಪ ಮಾಡುವ ಮೊದಲು ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿದು ಮಾತನಾಡಬೇಕೆಂದು ಆಗ್ರಹಿಸಿದರು.

ಶಾಸಕ ಶಿವಲಿಂಗೇಗೌಡ ಅವರು ನಾಲ್ಕು ಬಾರಿ ಅರಸೀಕೆರೆ ಕ್ಷೇತ್ರದಲ್ಲಿ ಶಾಸಕರಾಗಿ ಅತ್ಯುತ್ತಮ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಕ್ಷೇತ್ರದ ಮನೆ ಮಾತಾಗಿದ್ದಾರೆ. ಅವರ ಬಗ್ಗೆ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಹೊರಿಸುವುದನ್ನು ಬಿಟ್ಟು ಬಾಣಾವರದ ಅಭಿವೃದ್ಧಿಯ ಕಡೆಗೆ ಗಮನಹರಿಸಬೇಕು ಎಂದು ಅವರು ಒತ್ತಾಯಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಶಾರದಮ್ಮ ಪಾಪುಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ, ಹಾಲಿ ಸದಸ್ಯೆ ವೀಣಾ ಸುರೇಶ್, ಸದಸ್ಯರಾದ ಬಿ.ಡಿ.ಮಲ್ಲಿಕಾರ್ಜುನ್, ಆಶಾ ಹರೀಶ್, ಮೋಮಿನ್ ಮಾತನಾಡಿದರು. ಸದಸ್ಯರಾದ ಬಿ.ಹೆಚ್.ಸಂಜಯ್, ಬಿ.ಎನ್. ಧರ್ಮಣ್ಣ, ಶೃತಿ ಮಂಜುನಾಥ್, ಸರಸ್ವತಿ ಶ್ರೀನಿವಾಸ್, ಹೇಮಾವತಿ ಮಹಾಲಿಂಗರಾಜು, ಸಾಜಿದ ಬಾನು, ವಜೀರ್, ಶಾಹಿನಾ, ಇಮ್ತಿಯಾಜ್ ಇದ್ದರು.

## ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ



• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿ ವ್ಯಾಪ್ತಿಯ ಜನಸಾಮಾನ್ಯರಿಗೆ, ವಿದ್ಯಾರ್ಥಿಗಳಿಗೆ ಹಾಗು ಧರ್ಮಸ್ಥಳ-ಸುಬ್ರಹ್ಮಣ್ಯ ಹೋಗುವ ಭಕ್ತರಿಗೆ ಅನುಕೂಲಕ್ಕಾಗಿ ಹೊಸ ಬಸ್ ಸೌಲಭ್ಯ ಕಲ್ಪಿಸಬೇಕೆಂದು ಮನವಿ ಸಲ್ಲಿಸಲಾಯಿತು.

ಬಸ್ ಅರಕಲಗೂಡುನಿಂದ ಬೆಳಿಗ್ಗೆ 4.30ಕ್ಕೆ ಹೊರಟು, ಮಲ್ಲಿಪಟ್ಟಣ, ಶನಿವಾರಸಂತೆ, ಕೂಡುರಸ್ತೆ ಹೆತ್ತೂರು, ಹಿರಿಯೂರು ಕೂಡಿಗೆ, ವಳಲಹಳ್ಳಿ, ಹಿರಿದನಹಳ್ಳಿ, ಕಡಗರಹಳ್ಳಿ, ಹೆಗ್ಗದೆ-ಮಾರನಹಳ್ಳಿ, ಉಪ್ಪಿನಂಗಡಿ ಮಾರ್ಗವಾಗಿ ಮಂಗಳೂರಿಗೆ ತಲುಪುವಂತೆ. ಹಾಗೆಯೇ ಸಂಜೆ 5.30ಕ್ಕೆ ಮಂಗಳೂರಿನಿಂದ ಹೊರಟು ಇದೇ ಮಾರ್ಗವಾಗಿ ಅರಕಲಗೂಡು ತಲುಪುವ ಬಸ್ ವ್ಯವಸ್ಥೆ ಕಲ್ಪಿಸಿಕೊಡಲು ಮನವಿ ಮಾಡಲಾಯಿತು.

ಈ ಮನವಿಯನ್ನು ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳೆಗಾರರ ಸಂಘದವರು, ಸಂಸದ ಶ್ರೇಯಸ್ ಪಟೇಲ್ ಅವರ ಶಿಫಾರಸ್ಸು ಪತ್ರದೊಂದಿಗೆ ಜಿಲ್ಲಾ ಕೆಎಸ್‌ಆರ್‌ಟಿಸಿ ಉಪ ವಿಭಾಗ ನಿಯಂತ್ರಣಾಧಿಕಾರಿ ದಿಲೀಪ್ ಕುಮಾರ್ ಅವರಿಗೆ ಸಲ್ಲಿಸಿದರು.

ವಳಲಹಳ್ಳಿ ಬೆಳೆಗಾರರ ಸಂಘದ ಅಧ್ಯಕ್ಷ ದರ್ಶನ್, ಉಪಾಧ್ಯಕ್ಷ ರುದ್ರೇಶ್, ಕಾರ್ಯದರ್ಶಿ ಅರುಣ್ ಗೌಡ ಕರಡಿಗಾಲ, ಖಜಾಂಚಿ ಹೂವಣ್ಣ ಗೌಡ, ಸಂಘಟನಾ ಕಾರ್ಯದರ್ಶಿ ಜಾತಹಳ್ಳಿ ಅನಿಲ್, ಚಿನ್ನಹಳ್ಳಿ ಗಿರೀಶ್, ನಿರ್ದೇಶಕ ಕರಡಿಗಾಲ ಪರಮೇಶ್, ಮುಖಂಡರಾದ ಕೃಷ್ಣೇಗೌಡ, ಹಿರಿದನಹಳ್ಳಿ ಮೋಹನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಗಾಯಾಳು ಆಸ್ಪತ್ರೆಗೆ ದಾಖಲಿಸಿದ ಸಂಸದ



• ಪ್ರಜೋದಯ ವರದಿ

**ಹೊಳೆನರಸೀಪುರ:** ಸಿಮೆಂಟ್ ಚೀಲಗಳನ್ನು ಸಾಗಿಸುತ್ತಿದ್ದ ಟಾಟಾ ಏಸ್ ವಾಹನ ನಿಯಂತ್ರಣ ಮಗುಚಿ ಬಿದ್ದು ಗಾಯಗೊಂಡಿದ್ದ ಚಾಲಕನನ್ನು ಸಂಸದ ಶೇಯಸ್ ಪಟೇಲ್ ಅವರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಗೆ ನೆರವಾಗಿದ್ದಾರೆ.

ಹಾಸನ ಮುಖ್ಯರಸ್ತೆಯ ತಾಲ್ಲೂಕಿನ ಕಾಮಸಮುದ್ರ ಪಾಳ್ಯ ಬಳಿ ಸಿಮೆಂಟ್ ಚೀಲ ತುಂಬಿ ಕೊಂಡು ಸಾಗಿಸುತ್ತಿದ್ದ ವೇಳೆ ಟಾಟಾ ಏಸ್ ವಾಹನ ಮಗುಚಿಬಿದ್ದ ಪರಿಣಾಮ ಚಾಲಕ ಗಾಯ ಗೊಂಡಿದ್ದ. ಇದೇ ವೇಳೆಗೆ ರಾಷ್ಟ್ರೀಯ ಹೆದ್ದಾರಿ-373 ರಲ್ಲಿ ಸಂಚರಿಸುತ್ತಿದ್ದ ಸಂಸದ ಶ್ರೇಯಸ್ ಪಟೇಲ್ ಅವರು ಕೂಡಲೇ ತಮ್ಮ ಕಾರಿನಿಂದ ಇಳಿದು ಗಾಯಾಳು ಚಾಲಕನನ್ನು ಆಸ್ಪತ್ರೆಗೆ ಸಾಗಿ ಸುವ ಮೂಲಕ ಮಾನವೀಯತೆ ಮೆರೆದರು. ಮಾತ್ರವಲ್ಲ ಕೆಲಹೊತ್ತು ಘಟನಾ ಸ್ಥಳದಲ್ಲೇ ನಿಂತು ರಸ್ತೆಯಲ್ಲಿ ಚೆಲ್ಲಾಡಿದ್ದ ಸಿಮೆಂಟ್ ಚೀಲಗಳನ್ನು ಸ್ಥಳೀಯರ ಮೂಲಕ ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸಿಮೆಂಟ್ ತುಂಬಿದ ವಾಹನ ಪಲ್ಟಿಯಾಗಲು ಚಲಿಸುತ್ತಿದ್ದಾಗಲೇ ಟಯರ್ ಸಿಡಿದಿದ್ದು ಅಪಘಾತಕ್ಕೆ ಕಾರಣ ಎನ್ನಲಾಗಿದೆ.

# ಬೇಲೂರು ತಾಲ್ಲೂಕು ಕಚೇರಿ ಸ್ವಚ್ಛತೆ: ಡಿ.ಸಿ. ಶ್ಲಾಘನೆ

• ಪ್ರಜೋದಯ ವರದಿ

**ಬೇಲೂರು:** ಪರಿಸರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯ ಜೊತೆಗೆ ಯುವಪೀಳಿಗೆಗೆ ಮಾದರಿಯಾದ ಸಾಲುಮರದ ತಿಮ್ಮಕ್ಕ ಅವರ ಗೌರವಕ್ಕೆ ಚ್ಯುತಿಯಾಗದಂತೆ ಜಿಲ್ಲಾಡಳಿತ ಕ್ರಮ ವಹಿಸುತ್ತದೆ. ಸಾಲುಮರದ ತಿಮ್ಮಕ್ಕನವರು ದೇಶದ ಆಸ್ತಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಪಟ್ಟಣದ ನೆಹರುನಗರದಲ್ಲಿನ ತಾಲ್ಲೂಕು ಕಚೇರಿ ಹಿಂಭಾಗದಲ್ಲಿ ನಡೆದ ವನಮಹೋತ್ಸವ ಕಾರ್ಯದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಬೇಲೂರಿಗೆ ಪ್ರಥಮ ಭಾರಿಗೆ ಆಗಮಿಸಿದ ಸಂದರ್ಭದಲ್ಲಿ ತಾಲ್ಲೂಕು ಕಚೇರಿ ಹಿಂಭಾಗದಲ್ಲಿ ಅಸ್ವಚ್ಛತೆ ತಾಣವಾಗಿತ್ತು. ಇದನ್ನು ಕಂಡು ನೂತನ ತಹಸೀಲ್ದಾರ್ ಅವರಿಗೆ ಸ್ವಚ್ಛತೆ ನಡೆಸುವಂತೆ ಸೂಚನೆ ನೀಡಿದ ನಿಟ್ಟಿನಲ್ಲಿ ಬೇಲೂರು ತಹಸೀಲ್ದಾರ್ ಅಚ್ಚುಕಟ್ಟಾಗಿ ಸ್ವಚ್ಛತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಸಾಲುಮರದ ತಿಮ್ಮಕ್ಕನವರು ನೆಟ್ಟ ಗಿಡಗಳನ್ನು ಕಿತ್ತು



ಹಾಕಲಾಗಿದೆ ಎಂಬ ಬಗ್ಗೆ ಪರ-ವಿರೋಧ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆಯುತ್ತಿರುವುದು ಸತ್ಯ. ಆದರೆ, ಜಿಲ್ಲಾಡಳಿತ, ತಾಲ್ಲೂಕು ಆಡಳಿತ ಎಂದಿಗೂ ಸಾಲುಮರದ ತಿಮ್ಮಕ್ಕನವರ ಗೌರವಕ್ಕೆ ಧಕ್ಕೆ ಉಂಟಾಗದಂತೆ ಕ್ರಮ ವಹಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಈಗಾಗಲೇ ನಾವುಗಳು ಸಾಲುಮರದ ತಿಮ್ಮಕ್ಕನವರು ಬೇಲೂರು ಹೊರ ವಲಯದಲ್ಲಿ ವಾಸ್ತವ್ಯ ಇರುವ ಮನೆಗೆ ತೆರಳಿ ತಿಮ್ಮಕ್ಕನವರಲ್ಲಿ ಮಾತನಾಡಿದ್ದು, ದತ್ತುಪುತ್ರ ಕೂಡ ಚರ್ಚೆ ನಡೆಸಿದ್ದಾರೆ. ಅವರನ್ನೇ ಗಿಡ ಹಾಕಲು ಆಹ್ವಾನಿಸಲಾಗಿದೆ. ಆದರೆ ವಯಸ್ಸಿನ ಕಾರಣದಿಂದ ಅವರು ನಮಗೆ ಪೂರ್ಣ ಆಶೀರ್ವಾದ ಮಾಡಿದ್ದಾರೆ. ಸದ್ಯ ಸ್ವಚ್ಛತೆಗೊಳಿಸಿದ ಮೈದಾನದ ಸುತ್ತ ಗಿಡಗಳನ್ನು ಹಾಕಲಾಗುತ್ತದೆ. ಮುಂದಿನ ದಿನದಲ್ಲಿ ಕಚೇರಿ ನಿರ್ಮಾಣ, ಸಾರ್ವಜನಿಕರ ಸೇವೆಗೆ ಬಳಕೆ ಮಾಡಿಕೊಳ್ಳಲು ಮುಂದಾಗಲಾಗುತ್ತದೆ ಎಂದು ಅವರು ತಿಳಿಸಿದರು.

ತಾಲ್ಲೂಕು ಕಚೇರಿ ಹಿಂಭಾಗದಲ್ಲಿ ಉತ್ತಮ ಅವರಣವಿದೆ. ಮುಂದಿನ ದಿನದಲ್ಲಿ ತಹಸೀಲ್ದಾರ್ ಕಚೇರಿ ಹಾಗೂ ತಾಲ್ಲೂಕು ಆಡಳಿತಕ್ಕೆ ಸಂಬಂಧಪಟ್ಟ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸುವ ಮೊದಲು ಸ್ವಚ್ಛತೆ ನಡೆಸುವುದು ಮುಖ್ಯ. ಈ ನಿಟ್ಟಿನಲ್ಲಿ ಬೇಲೂರು ತಹಸೀಲ್ದಾರ್ ಉತ್ತಮ ಕೆಲಸ ಮಾಡಿದ್ದಾರೆ. ಕಚೇರಿಗೆ ಹಾವು, ಚೇಳು ಕಾಟದ ಬಗ್ಗೆ ಸ್ವತಃ ಸಾರ್ವಜನಿಕರು ದೂರು ನೀಡಿದ್ದಾರೆ. ವಿಶೇಷವಾಗಿ ಗಿಡ ಮರಗಳ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ. ತಾಲ್ಲೂಕಿಗೆ ಅಗತ್ಯ ಸವಲತ್ತುಗಳನ್ನು ನೀಡುವಲ್ಲಿ ಜಿಲ್ಲಾಡಳಿತ ಬದ್ಧವಾಗಿದೆ. ವಿನಾಃಕಾರಣ ಸಮಸ್ಯೆಗಳ ಸೃಷ್ಟಿ ಬೇಡ ಎಂದು ಅವರು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಬೇಲೂರು ತಹಸೀಲ್ದಾರ್ ಶ್ರೀಧರ್ ಕಂಕನವಾಡಿ, ಅರಕ್ಷಕ ನಿರೀಕ್ಷಕ ರೇವಣ್ಣ, ಕೆಡಿಪಿ ಸದಸ್ಯ ಚೇತನ್ , ದಿವ್ಯ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಗೌಡೇಗೌಡ, ಮುಖಂಡರಾದ ಚಿಕ್ಕಬ್ಯಾಡಿಗೆರೆ ಮಂಜುನಾಥ್, ರಾಯಪುರ ಶಿವಣ್ಣ ಹಾಗೂ ತಾಲ್ಲೂಕು ಕಚೇರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಆಹಾರ ಇಲಾಖೆ ಮುಖ್ಯಸ್ಥರು ಸೇರಿದಂತೆ ಶಾಲಾ ಮಕ್ಕಳು ವನಮಹೋತ್ಸವದಲ್ಲಿ ಭಾಗವಹಿಸಿದ್ದರು.

## ಮಕ್ಕಳ ಜಗಳಕ್ಕೆ ತಂದೆಯ ಕೊಲೆ

» ಮೊದಲನೇ ಪುಟದಿಂದ

ಕರೆದುಕೊಂಡು ಹೋಗಿದ್ದಾರೆ. ಅಷ್ಟರಲ್ಲಿ ತೌಫಿಕ್ ಕೋಮಾಗೆ ಜಾರಿದ್ದು ವಾಪಾಸ್ ಹಾಸನದ ಖಾಸಗಿ ಕರೆ ತಂದಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೆ ತೌಫಿಕ್ ಶುಕ್ರವಾರ ರಾತ್ರಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಅದರಿಂದ ರೊಚ್ಚಿಗೆದ್ದ ತೌಫಿಕ್ ಕಡೆಯವರು ಫರಾನ್ ಮನೆ ಮೇಲೆ ದಾಳಿ ಮಾಡಿ ದ್ದಾರೆ. ಕಿಟಕಿ ಗ್ಲಾಸ್ ಗಳನ್ನು ಒಡೆದು ಮನೆ ಮುಂದೆ ನಿಂತಿದ್ದ ಕಾರಿಗೆ ಬೆಂಕಿ ಹಚ್ಚಿ ಆಕ್ರೋಶ ಹೊರಹಾಕಿದ್ದಾರೆ.

ಅದಲ್ಲದೆ ಅರಸೀಕೆರೆ ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಾಘವೇಂದ್ರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಹಲ್ಲೆ ನಡೆಸಿದಾಗ ದೂರು ಕೊಟ್ಟರು ತೆಗೆದುಕೊಂಡಿಲ್ಲ. ದೊಂಬಿ ಗಲಭೆ ಎಂದು ಪ್ರಕರಣ ದಾಖಲು ಮಾಡಿ ಸ್ಟೇಷನ್ ಬೇಲ್ ನೀಡಿದ್ದಾರೆ. ಅಂತಹ ಬೇಜಾಬ್ದಾರಿ ಅಧಿಕಾರಿಯನ್ನು ಅಮಾನತು ಮಾಡುವಂತೆ ಆಗ್ರಹಿಸಿದ್ದಾರೆ. ಅರಿವಿಲ್ಲದ ಮಕ್ಕಳು ಶಾಲೆಯಲ್ಲಿ ಮಾಡಿಕೊಂಡ ಜಗಳ ಒಂದು ಜೀವವನ್ನೇ ತೆಗೆದಂತಾಗಿದೆ. ಸದ್ಯ ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

### ಇನ್ಸ್‌ಪೆಕ್ಟರ್ ವಿರುದ್ಧ ಅಸಮಾಧಾನ

ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಹಾಗೂ ಜೆ.ಡಿ.ಎಸ್. ಮುಖಂಡ ಎನ್.ಆರ್.ಸಂತೋಷ್ ಅವರು ಶನಿವಾರ ಮೃತನ ಅಂತಿಮ ದರ್ಶನ ಪಡೆದು ನಗರ ಪೊಲೀಸ್ ಇನ್ಸ್ ಪೆಕ್ಟರ್ ಜಿ.ಕೆ.ರಾಘವೇಂದ್ರ, ಅವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಅವರು ಮಾತನಾಡಿ, ಕಳೆದ ಒಂದು ವರ್ಷದಿಂದ ಅರಸೀಕೆರೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅಪರಾಧ ಪ್ರಕರಣಗಳು ಹೆಚ್ಚುತ್ತಲೇ ಇದ್ದರು ಪೊಲೀಸರು ಬಿಗಿಯಾದ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

# ಬ್ಯಾಕರವಳ್ಳಿ ಮೊರಾರ್ಜಿ ವಸತಿ ಶಾಲೆ ಚಾಂಪಿಯನ್



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಹೆತ್ತೂರು ಹೋಬಳಿ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಬ್ಯಾಕರವಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ವೈಯಕ್ತಿಕ ಹಾಗು ತಂಡ ಚಾಂಪಿಯನ್‌ಷಿಪ್‌ಗಳನ್ನು ಗೆದ್ದು, ಒಟ್ಟು 194 ಅಂಕಗಳೊಂದಿಗೆ ಸಮಗ್ರ ಚಾಂಪಿಯನ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದೆ.

**ಬಾಲಕರ ವಿಭಾಗ:**

ಬಾಲಕರ ವಿಭಾಗದಲ್ಲಿ 3000 ಮೀ. ಓಟದಲ್ಲಿ ಪ್ರಥಮ ಮತ್ತು ತೃತೀಯ, 1500 ಮೀ. ಪ್ರಥಮ, 800 ಮೀ. ದ್ವಿತೀಯ, 400 ಮೀ. ದ್ವಿತೀಯ, 200 ಮೀ. ಓಟದಲ್ಲಿ ದ್ವಿತೀಯ, ಗುಂಡು ಎಸೆತದಲ್ಲಿ ಪ್ರಥಮ ಮತ್ತು ದ್ವಿತೀಯ, ತಟ್ಟೆ ಎಸೆತದಲ್ಲಿ ಪ್ರಥಮ ಹಾಗು ದ್ವಿತೀಯ, ಜಾವೆಲಿನ್ ಪ್ರಥಮ, ತ್ರಿವಿಧ ಜಿಗಿತ ಪ್ರಥಮ, ಕಬಡ್ಡಿ, ವಾಲಿಬಾಲ್ ಮತ್ತು ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

**ಬಾಲಕಿಯರ ವಿಭಾಗ:**

ಬಾಲಕಿಯರು 3000 ಮೀ. ಓಟದಲ್ಲಿ ಪ್ರಥಮ, 1500 ಮೀ. ಪ್ರಥಮ, 200 ಮೀ. ಪ್ರಥಮ, 100 ಮೀ. ಪ್ರಥಮ ಮತ್ತು ತೃತೀಯ, 4X100 ಮೀ. ಹಾಗು 4X400 ಮೀ. ರಿಲೇಗಳಲ್ಲಿ ಪ್ರಥಮ, ಗುಂಡು ಎಸೆತದಲ್ಲಿ ಪ್ರಥಮ, ಜಾವೆಲಿನ್ ದ್ವಿತೀಯ, ಉದ್ದ ಜಿಗಿತದಲ್ಲಿ ಪ್ರಥಮ, ತ್ರಿವಿಧ ಜಿಗಿತದಲ್ಲಿ ಪ್ರಥಮ ಮತ್ತು ದ್ವಿತೀಯ, ಕಬಡ್ಡಿ ಮತ್ತು ವಾಲಿಬಾಲ್‌ನಲ್ಲಿ ಪ್ರಥಮ, ಥ್ರೋಬಾಲ್‌ನಲ್ಲಿ ದ್ವಿತೀಯ ಹಾಗು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.

ಬಾಲಕರ ಮತ್ತು ಬಾಲಕಿಯರ ಇಬ್ಬರ ವಿಭಾಗದಲ್ಲೂ ವೈಯಕ್ತಿಕ ಚಾಂಪಿಯನ್‌ಷಿಪ್ ಗೆದ್ದಿರುವುದರ ಜೊತೆಗೆ, ತಂಡ ಚಾಂಪಿಯನ್‌ಷಿಪ್‌ಗಳಲ್ಲಿ ಸಹ ಪ್ರಥಮ ಸ್ಥಾನ ಗಳಿಸಿ ಶಾಲೆಗೆ ಗೌರವ ತಂದಿರುವ ವಿದ್ಯಾರ್ಥಿಗಳನ್ನು ಹಾಗು ಕಾರಣರಾದ ದೈಹಿಕ ಶಿಕ್ಷಣ ತರಬೇತುದಾರರು, ಶಿಕ್ಷಕರು, ಭೋದಕೇತರ ಸಿಬ್ಬಂದಿಯನ್ನು ಪ್ರಾಂಶುಪಾಲರು ಅಭಿನಂದಿಸಿದ್ದಾರೆ.

## ಸೆ.9 ರಂದು ಆರೋಗ್ಯ ಶಿಬಿರ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಸೆ.9 ರ ಮಂಗಳವಾರ ಬೃಹತ್ ಆರೋಗ್ಯ ಶಿಬಿರ ನಡೆಸುತ್ತಿರುವುದಾಗಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎಚ್.ಎನ್.ರಾಜೇಶ್ ತಿಳಿಸಿದರು.

ತಾಲ್ಲೂಕು ಕಚೇರಿಯಲ್ಲಿ ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಅಧ್ಯಕ್ಷತೆಯಲ್ಲಿ ಪೂರ್ವ ತಯಾರಿ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ತಾಲ್ಲೂಕು ಆಡಳಿತ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ನಾಗರೀಕರ ಆರೋಗ್ಯ ತಪಾಸಣೆಗಾಗಿ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದ್ದೇವೆ. ಉಚಿತವಾಗಿ ತಪಾಸಣೆ ಹಾಗೂ ಅಗತ್ಯ ಔಷದ ವಿತರಿಸಲಾಗುವುದು. ಪಟ್ಟಣದ ಸರಕಾರಿಆಸ್ಪತ್ರೆಯಲ್ಲಿನ ನುರಿತ ತಜ್ಞರು, ಹೃದಯ ತಜ್ಞ, ಮಕ್ಕಳ ಹಾಗೂ ಸ್ತ್ರೀರೋಗ ತಜ್ಞರು, ಫಿಸಿಶಿಯನ್‌ಗಳು ಎಲ್ಲಾ ರೀತಿಯ ಪರೀಕ್ಷೆ ನಡೆಸಿ ತಪಾಸಣೆ ಮಾಡಲಿದ್ದಾರೆ. ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕೆಂದು ಕೋರಿದ್ದಾರೆ.

ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ಸುರೇಶ್, ಬಿಸಿಎಂ ಸಹಾಯಕ ನಿರ್ದೇಶಕ ಹರೀಶ್, ಜಿಪಂ ಎಇಇ ಸೋಮಶೇಖರ್, ಆಯುಷ್ ವೈದ್ಯರು ಇದ್ದರು.

## ರಾಜಕೀಯ ಲಾಭಕ್ಕಾಗಿ ಧರ್ಮಸ್ಥಳ ಯಾತ್ರೆ




• ಪ್ರಜೋದಯ ವರದಿ

**ಹಾಸನ:** ಧರ್ಮಸ್ಥಳ ಪ್ರಕರಣವನ್ನು ರಾಜಕೀಯ ಲಾಭಕ್ಕಾಗಿ ಜೀವಂತವಾಗಿಡಲು ಬಿಜೆಪಿ ಹಾಗು ಜೆಡಿಎಸ್ ಪ್ರಯತ್ನಿಸುತ್ತಿದ್ದು ಅದರ ಭಾಗವಾಗಿ ಯಾತ್ರೆ ನಡೆಸುತ್ತಿವೆಯೆಂದು ಎಎಪಿ ಮುಖಂಡ ಅಗಿಲೆ ಯೋಗೇಶ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಧರ್ಮಸ್ಥಳ ಮಂಜುನಾಥನಿಗೆ ಕೋಟ್ಯಾಂತರ ಭಕ್ತರಿದ್ದಾರೆ. ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಮೇಲೆ ನಮಗೂ ಅಪಾರ ಗೌರವವಿದೆ. ಹೆಗ್ಗಡೆ ಅವರ ಕುಟುಂಬಸ್ಥರ ಮೇಲೆ ಗುರುತರ ಆರೋಪ ಕೇಳಿಬಂದಿದೆ. ಸತ್ಯಾಸತ್ಯತೆ ಅರಿಯಲು ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿದೆ. ಅಧಿಕಾರಿಗಳು ಪಾರದರ್ಶಕವಾಗಿ ತನಿಖೆ ಮಾಡುತ್ತಿದ್ದಾರೆ. ಆದರೆ ತನಿಖೆಯ ದಿಕ್ಕು ತಪ್ಪಿಸಲು ಬಿಜೆಪಿ-ಜೆಡಿಎಸ್ ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದರು.

ಮಂಜುನಾಥ ಸ್ವಾಮಿಯನ್ನು ರಕ್ಷಿಸುವುದು ಬಿಜೆಪಿ-ಜೆಡಿಎಸ್ ಕರ್ತವ್ಯವಲ್ಲ. ಮಂಜುನಾಥ ಹಾಗು ಅಣ್ಣಪ್ಪ ಶಕ್ತಿವಂತರಾಗಿದ್ದು ಅವರಿಗೆ ರಾಜಕೀಯದವರ ಸಹಾಯ ಬೇಕಿಲ್ಲ. ವೀರೇಂದ್ರ ಹೆಗ್ಗಡೆ ಅವರಿಂದ ಏನಾದರೂ ನೆರವಾಗುತ್ತದೆಂಬ ಕಾರಣಕ್ಕೆ ಇವರು ಸತ್ಯ ಯಾತ್ರೆ, ಧರ್ಮ ಯಾತ್ರೆ ಹೆಸರಿನಲ್ಲಿ ನಾಟಕವಾಡುತ್ತಿದ್ದಾರೆಂದು ಟೀಕಿಸಿದರು.

ಆವರ ಮುಖ ನೋಡಿದರೆ ಸ್ವತ: ಶ್ರೀ ಮಂಜುನಾಥನೇ ಹೆದರುತ್ತಾನೆ. ಅಷ್ಟೊಂದು ಕೆಟ್ಟ ಮನಸ್ಥಿತಿಯ ಇವರು ಯಾತ್ರೆ ಎಂಬ ಪದಕ್ಕೆ ಕಳಂಕ ತರುತ್ತಿದ್ದಾರೆ. ನೂರಾರು ವಾಹನಗಳಲ್ಲಿ ಯಾತ್ರೆ ಹಮ್ಮಿಕೊಂಡಿದ್ದಾರೆ. ನಾವು ಶ್ರೀ ಮಂಜುನಾಥನ ಭಕ್ತರೇ ಆಗಿದ್ದು ಎಸ್‌ಐಟಿ ತನಿಖೆ ಮುಗಿಯುವ ವರೆಗೆ ಸುಮ್ಮನಿರಬೇಕಿತ್ತೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ಪಂಕಜಾ, ಮಮತಾ ಇದ್ದರು.

## ನಿವೃತ್ತ ಮುಖ್ಯ ಶಿಕ್ಷಕ ಕೆ.ಲಕ್ಷ್ಮೇಗೌಡ ನಿಧನ



**ಹೊಳೆನರಸೀಪುರ:** ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದ ಹಳೇಕೋಟೆ ಹೋಬಳಿ ಕಬ್ಬಿನಹಳ್ಳಿ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ಕೆ.ಲಕ್ಷ್ಮೇಗೌಡ (87) ಶನಿವಾರ ನಿಧನರಾದರು.

ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಹಾಗೂ ಮುಖ್ಯೋಪಾಧ್ಯಾಯರಾಗಿ ಮೊಸಳೆಹೊಸಳ್ಳಿ, ಮುತ್ತಿಗೆ ಹಿರೇಹಳ್ಳಿ, ದುಂಡನಾಯ ಕನಹಳ್ಳಿ, ಸಕಲೇಶಪುರದ ಮಾರನಹಳ್ಳಿಯಲ್ಲಿ ಸೇವೆ ಸಲ್ಲಿಸಿದ್ದರು.

### ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯ ಹಾಸನ ಜಿಲ್ಲೆ.

**ಮೇಲ್ಮನವಿ ನಂಬರ್:- 289/2025-26**

ಅಪೀಲುದಾರರು:- ಚಂದ್ರಪ್ಪ ಬಿನ್ ತಿಮ್ಮಯ್ಯ

**ವಿರುದ್ಧ**

ಎದುರುದಾರರು:-
2) ರಮೇಶ್ ಬಿನ್ ರಾಜೇಗೌಡ ಮತ್ತು ಇತರರು
3) ಬಿ.ಎಸ್.ತಿರುಮಲೇಗೌಡ ಬಿನ್ ತಿಮ್ಮೇಗೌಡ
4) ನಂಜುಂಡೇಗೌಡ ಬಿನ್ ತಿಮ್ಮೇಗೌಡ
5) ಲಕ್ಷ್ಮಿ ಕೋಂ ಸಿ.ಎಸ್.ನಾರಾಯಣ
6) ನಝುರಿನ್ ಸಾಬ್ ಬಿನ್ ಮೊಹಮ್ಮದ್‌ಗೌಸ್
7) ಸರೋಜಮ್ಮ ಕೋಂ ಸುಬ್ಬೇಗೌಡ
8) ಬಿ.ಎಂ.ಲೋಕೇಶ್ ಬಿನ್ ಎಸ್.ಮರಿಯಣ್ಣ
9) ನಂಜಪ್ಪ ಬಿನ್ ಗಿರಿಗೌಡ
10) ಕೆ.ಆರ್.ವೇದಾವತಿ ಕೋಂ ಶಂಕರಲಿಂಗೇಗೌಡ
11) ಡಿ.ಟಿ.ನಾಗೇಶ ಬಿನ್ ತಿಮ್ಮೇಗೌಡ
12) ಮೋಹನ್‌ಬಾಬು ಬಿನ್ ಲೇಟ್ ಸೋಮಶೇಖರ್
13) ದೇವರಾಜು ಬಿನ್ ನಂಜಪ್ಪ
14) ರತ್ನಮ್ಮ ಕೋಂ ನಾಗೇಗೌಡ
15) ಚಿಕ್ಕೇಗೌಡ ಬಿನ್ ಚಿಕ್ಕೇಗೌಡ
16) ಎಸ್.ಎಸ್.ಗಿರೀಶ್‌ಬಾಬು ಬಿನ್ ಎಸ್.ಡಿ.ಶಿವಣ್ಣ
17) ಲಕ್ಷ್ಮಣ್‌ಗೌಡ ಬಿನ್ ಲೇಟ್ ರಂಗೇಗೌಡ
18) ಆರ್.ಕೃಷ್ಣಮೂರ್ತಿ ಬಿನ್ ರಾಮಕೃಷ್ಣ
19) ರಜನಿ ಕೋಂ ಬಿ.ಎಂ.ಗಣೇಶ್
20) ಆರ್.ಮೋಹನ್‌ಕುಮಾರ್ ಬಿನ್ ರಾಮಕೃಷ್ಣ
21) ನಂಜಪ್ಪ ಬಿನ್ ಗಿರೀಗೌಡ
22) ರವಿಕುಮಾರ್ ಬಿನ್ ತಮ್ಮಣ್ಣ
23) ಎನ್.ಎಸ್.ಪ್ರೀತಿ ಕೋಂ ಗೋಪಿ
24) ಮಂಜುಳಮ್ಮ ಉ|| ಮಂಜುಳ ಕೋಂ ರಾಮೇಗೌಡ
25) ಡಿ.ಶಿವಣ್ಣ
26) ಮಂಜುಳ ಕೋಂ ಜೆ.ಸಿ.ನಾಗರಾಜು
27) ಹೆಚ್.ಪಿ.ಕೃಷ್ಣಮೂರ್ತಿ ಜಾಬ್ ಬಿನ್ ಪುಟ್ಟಸೋಮಚಾರ್
28) ಬಿ.ಎಸ್.ಬೆಟ್ಟೇಗೌಡ ಬಿನ್ ನಂಜೇಗೌಡ
29) ಸುಮಿತ್ರಾ ಕೋಂ ಪ್ರಕಾಶ್
30) ಪ್ರಕಾಶ ಬಿನ್ ರಂಗಪ್ಪ
31) ತಬಾನಾ ಕೋಂ ಪಯಾಜ್ ಪಾಷ
32) ಹೆಚ್.ಬಿ.ಗೋಪಾಲ ಬಿನ್ ಬೋರೇಗೌಡ
33) ಲಕ್ಷ್ಮಮ್ಮ ಕೋಂ ಗೋವಿಂದೇಗೌಡ
34) ವಿನುತ ಬಿನ್ ತಮ್ಮಯ್ಯ
35) ರೇಖಾ ಹೆಚ್.ಸಿ. ಕೋಂ ಸ್ವಾಮಿ ಉ|| ಸೋಮಶೇಖರ
36) ವೀಣಾ ಜೆ.ಕೆ. ಬಿನ್ ಶ್ರೀನಿವಾಸ್
37) ವೈಕುಂಠ ಬಿನ್ ಕಾಳಶೆಟ್ಟಿ
38) ಪಾರ್ವತಿ ಡಿ.ವೈ. ಕೋಂ ಆನಂದ - ಎಲ್ಲರ ವಿಳಾಸವು ಹೊಸೂರು ಗ್ರಾಮ, ದಂಡಿಗನಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು.

ಹೊಸೂರು ಗ್ರಾಮ, ದಂಡಿಗನಹಳ್ಳಿ ಹೋಬಳಿ, ಚ.ರಾ.ಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. ಈ ಮೇಲಿನ ಅಪಿಲನ್ನು ಅಪಿಲುದಾರರು 2,3 ರಿಂದ 34 ರ ವರೆಗೆ ಹಾಗೂ 36,37,38, 39ನೇ ಎದುರುದಾರರ ವಿರುದ್ಧ ಹಾಸನ ಜಿಲ್ಲೆ, ಚ.ರಾ.ಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಹೊಸೂರು ಗ್ರಾಮದ ಸರ್ವೆ ನಂ. 73/1 ಕ್ಕೆ ಸಂಬಂಧಿಸಿದಂತೆ ದುರಸ್ತಿ ನಕ್ಷೆ ರದ್ದು ಕೋರಿ ಅಪೀಲನ್ನು ದಿನಾಂಕ: 08/09/2025 ಕ್ಕೆ 2 ರಿಂದ 34ನೇ ಹಾಗೂ 36 ರಿಂದ 39ನೇ ಎದುರುದಾರರ ಹಾಜರಾತಿಗೆಂದು ಮುಂದೂಡಲಾಗಿದೆ. ನಿಗದಿತ ದಿನಾಂಕದಂದು ಮಧ್ಯಾಹ್ನ 3 ಗಂಟೆಗೆ ಮೇಲೆ ತಿಳಿಸಿದ ಎದುರುದಾರರು ನೀವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಬೇಕಾಗಿರುತ್ತದೆ. ಒಂದು ವೇಳೆ ನೀವುಗಳು ನಿಮ್ಮಗಳ ಅನುಪಸ್ಥಿತಿಯಲ್ಲಿ ಈ ಮೇಲಿನ ಅಪೀಲಿನ ನಡವಳಿಗಳು ನಡೆಯುತ್ತವೆ ಮತ್ತು ನ್ಯಾಯಾಲಯದ ಮುದ್ರಣದೊಂದಿಗೆ ತೆಗೆದುಕೊಂಡಿರುತ್ತೇನೆ.

ಅರ್ಜಿದಾರರ ಪರ ವಕೀಲರು
ಕೆ.ಷಣ್ಮುಖ ಎಂ.ಎ., ಎಲ್‌ಎಲ್‌ಬಿ
ಶ್ರವಣಬೆಳಗೊಳ ಟೌನ್
ದಿನಾಂಕ: 28/08/2025

ನ್ಯಾಯಾಲಯದ ಅಪ್ಪಣೆ ಮೇರೆಗೆ
ಜಿಲ್ಲಾಧಿಕಾರಿಗಳು ಮತ್ತು ಸಹಾಯಕರು
ಮತ್ತು ಪಾನಮುಕ್ತ ಭೂ ದಾಖಲೆಗಳು
ಉಪ ನಿರ್ದೇಶಕರವರ ನ್ಯಾಯಾಲಯ

## ಮಂಜುನಾಥ್ ನುಗ್ಗೇಹಳ್ಳಿ ಗ್ರಾ.ಪಂ. ಅಧ್ಯಕ್ಷ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನಕ್ಕೆ ಜಿ.ಎನ್.ಕೊಪ್ಪಲು ಗ್ರಾಮದ ಎನ್.ಎಸ್.ಮಂಜುನಾಥ್ ಶನಿವಾರ ಅವಿರೋಧವಾಗಿ ಆಯ್ಕೆಗೊಂಡರು.

ಈ ಹಿಂದೆ ಅಧ್ಯಕ್ಷರಾಗಿದ್ದ ಎನ್. ಆರ್.ಶಿವಕುಮಾರ್ ರಾಜೀನಾಮೆ ನೀಡಿದ್ದರಿಂದತೆರವಾದ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ಶನಿವಾರ ನಡೆಯಿತು. ಎನ್.ಎಸ್.ಮಂಜುನಾಥ್ (ಸ್ವಾಮಣ್ಣ) ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನೇ ಅವಿರೋಧ ಆಯ್ಕೆಯೆಂದು ಚುನಾವಣಾಧಿಕಾರಿ ಹರೀಶ್ ಘೋಷಿಸಿದರು.

ನೂತನ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಶಾಸಕ ಸಿ.ಎನ್. ಬಾಲಕೃಷ್ಣ ಅವರ ಸಲಹೆ, ಸೂಚನೆ ಪಡೆದು ಹಾಗೂ ಎಲ್ಲಾ ಸದಸ್ಯರ ಸಹಕಾರದಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆ, ಕುಡಿಯುವ ನೀರು ನಿರ್ವಹಣೆ ಹಾಗೂ ಉತ್ತಮ ವಿದ್ಯುತ್ ದೀಪಗಳ ವ್ಯವಸ್ಥೆ ಸೇರಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದು ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಪುರವರ್ಗ ಹಿರೇಮಠದ ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು. ಪಂಚಾಯಿತಿ ವತಿಯಿಂದ ಅಭಿನಯಿಸಲಾಯಿತು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ರಾಧಾ ಹರೀಶ್, ಸದಸ್ಯರಾದ ವಿಜಯಲಕ್ಷ್ಮಿ ಜಗದೀಶ್, ಶಬಿನ್ ತಾಜ್, ಜಬಿನ್ ತಾಜ್, ವಿಠಲ್ ಕುಮಾರ್, ಹೊನ್ನೇಗೌಡ, ನಟರಾಜ್, ಗೌಡಕಿ ಮಂಜು, ಗ್ಯಾಸ್ ರಾಜು, ರೇಷ್ಮಾ, ಸವಿತಾ, ದ್ರಾಕ್ಷಾಯಿಣಿ, ಮಂಜುಳಾ, ದೊರೆಸ್ವಾಮಿ, ತೋಟಿ ನಾಗರಾಜ್, ಮಹಮ್ಮದ್ ಜಾವಿದ್, ಕೃಪಾಶಂಕರ್, ಪುಟ್ಟಸ್ವಾಮಿ ಹಾಜರಿದ್ದರು.

# ಬಾಲ್ಯದಿಂದಲೇ ಸಹಕಾರದ ಮೂಲತತ್ವ ಅಳವಡಿಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ಸಹಕಾರದ ಮೂಲತತ್ವವಾದ ಒಬ್ಬರಿಗಾಗಿ ಎಲ್ಲರೂ, ಎಲ್ಲರಿಗಾಗಿ ಒಬ್ಬರು ಎಂಬುದನ್ನು ಚಿಕ್ಕಂದಿನಿಂದಲೇ ಕಲಿಯಬೇಕು ಎಂದು ಸರ್ಕಾರೀ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ ಪ್ರಾಂಶುಪಾಲ ಡಾ..ಇರ್ಷಾದ್ ಕರೆ ನೀಡಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಹಾಸನ ಜಿಲ್ಲಾ ಸಹಕಾರ ಒಕ್ಕೂಟ, ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಹಾಸನ ಸಹಕಾರ ಹಾಲು ಒಕ್ಕೂಟ ಸರ್ಕಾರೀ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು, ಹಾಸನ ಮತ್ತು ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಸಹಕಾರ ಭವನದಲ್ಲಿ ಇಂದು ನಡೆದ ಸಹಕಾರ'' ಕುರಿತಂತೆ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಮತ್ತು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ವಿವಿಧ ರೀತಿಯ ಸಹಕಾರ ಸಂಘಗಳಿದ್ದು ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅದರ



ಸದುಪಯೋಗ ಪಡೆಯಬೇಕೆಂದರು. ಸಹಕಾರ ಸಂಘದ ಮೂಲ ತತ್ವವಾದ ಒಬ್ಬರಿಗಾಗಿ ಎಲ್ಲರೂ ಎಲ್ಲರಿಗಾಗಿ ಒಬ್ಬರು ಎಂಬಂತೆ ಮನುಷ್ಯ ತನಗಾಗಿ ಬದುಕುವುದು ಸಹಜ ಇರುವಂತಹ ಸಮಯದಲ್ಲಿ ಇತರರಿಗಾಗಿ ಸ್ವಲ್ಪ ಸಮಯವನ್ನು ಮೀಸಲಿರಿಸುವುದು ಅವರ ಕಷ್ಟ ಕಾರ್ಪಣ್ಯಗಳಲ್ಲಿ ಸಹಕರಿಸುವುದು ಮುಖ್ಯವಾಗಿರುತ್ತದೆ. ಈ ದಿಸೆಯಲ್ಲಿ ಯುವಜನರು ಗಮನ ಹರಿಸಿ ಮುಂದುವರೆಯ ಬೇಕೆಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಸ್.ಎನ್. ಪ್ರಕಾಶ್ ಮಾತನಾಡಿ, ಪ್ರಸ್ತುತ ವಿವಿಧ ರೀತಿಯ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ರೈತರು, ಸಹಕಾರಿಗಳು ಅರ್ಥಿಕ ಅಭಿವೃದ್ಧಿ ಹೊಂದಲು ಸಹಕಾರ ಸಂಘಗಳು ತುಂಬ ಉಪಯುಕ್ತವಾಗಿದೆ. ಜಿಲ್ಲೆಯಲ್ಲಿರುವ ವಿವಿಧ ರೀತಿಯ ಸಹಕಾರ ಸಂಘಗಳಿಂದ ಆಗುತ್ತಿರುವ ಅನೂಕೂಲಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಇಂತಹ ಸಹಕಾರ ಕುರಿತ ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪಾಲ್ಗೊಂಡು ಪ್ರಸ್ತುತ ಕಾಲಘಟ್ಟದಲ್ಲಿ ಉತ್ತಮ ಸಹಕಾರಿಗಳಾಗಿ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ವಿ. ಎನ್. ರಾಜಣ್ಣ, ಒಕ್ಕೂಟದ ಉಪಾಧ್ಯಕ್ಷ ಸೋಮೇಗೌಡ, ನಿರ್ದೇಶಕರಾದ ವಿ.ಎನ್.ರಾಜಣ್ಣ, ನಾಗರಾಜು, ಪುಟ್ಟಸ್ವಾಮಿಗೌಡ, ಪದ್ಮರಾಜು, ಸೋಮಣ್ಣ ಭಾಗವಹಿಸಿದ್ದರು.

## ಚೀನಾದಲ್ಲಿ ಮೋದಿಗೆ ಭವ್ಯ ಸುಸ್ವಾಗತ

• ಪ್ರಜೋದಯ ವರದಿ

**ಟಿಯಾಂಜಿನ್:** ಏಳು ವರ್ಷಗಳ ಅಂತರದ ನಂತರ, ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಚೀನಾಕ್ಕೆ ಬಂದಿಳಿದಿದ್ದು, ಟಿಯಾಂಜಿನ್ ವಿಮಾನ ನಿಲ್ದಾಣದಲ್ಲಿ ಭವ್ಯ ಸ್ವಾಗತ ನೀಡಲಾಯಿತು. ಪ್ರಧಾನಿ ಮೋದಿ 2018ರಲ್ಲಿ ಕೊನೆಯ ಬಾರಿ ಚೀನಾ ಪ್ರವಾಸ ಕೈಗೊಂಡಿದ್ದರು.

ವಾಷಿಂಗ್ಟನ್‌ನ ಸುಂಕ ನೀತಿಗಳಿಂದ ಉಂಟಾದ ಭಾರತ-ಅಮೆರಿಕ ಸಂಬಂಧಗಳಲ್ಲಿನ ಹಠಾತ್ ಕುಸಿತದ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯ ಈ ಭೇಟಿ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಎರಡು ದಿನಗಳ ಜಪಾನ್ ಭೇಟಿ ಮುಗಿಸಿದ ಪ್ರಧಾನಿ ಮೋದಿ, ಆಗಸ್ಟ್ 31 ಮತ್ತು ಸೆ.1 ರಂದು ನಡೆಯಲಿರುವ ಶಾಂಘೈ ಸಹಕಾರ ಒಕ್ಕೂಟದ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಇಂದು ಚೀನಾಗೆ ಆಗಮಿಸಿದ್ದಾರೆ.

ಆದಾಗ್ಯೂ, ಅಮೆರಿಕದ ಸುಂಕ ಸಂಘರ್ಷ ಪ್ರಪಂಚದಾದ್ಯಂತದ ಬಹುತೇಕ ಎಲ್ಲಾ ಪ್ರಮುಖ ಆರ್ಥಿಕತೆಗಳ ಮೇಲೆ ಪರಿಣಾಮ ಬೀರಿರುವ ಹಿನ್ನೆಲೆಯಲ್ಲಿ ಭಾನುವಾರ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಪ್ರಧಾನಿ ಮೋದಿಯ ಸಭೆ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019